# ಗ್ರಾಮ ಪಂಚಾಯತಿ ಮಹಿಳಾ ಅಭಿವೃದ್ಧಿ ಯೋಜನೆ ಮತ್ತು ಮಕ್ಕಳ ಅಭಿವೃದ್ಧಿ ಯೋಜನೆ

## - ಕೈಪಿಡಿ




ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಇಲಾಖೆ

ಅಬ್ದುಲ್ ನಜೀರ್ ಸಾಬ್
ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಸಂಸ್ಥೆ

ಕರ್ನಾಟಕ ಸರ್ಕಾರ

Women Friendly Village

Child Friendly Village

# ಗ್ರಾಮ ಪಂಚಾಯಿತಿ ಮಹಿಳಾ ಅಭಿವೃದ್ಧಿ ಯೋಜನೆ

# &

# ಗ್ರಾಮ ಪಂಚಾಯಿತಿ ಮಕ್ಕಳ ಅಭಿವೃದ್ಧಿ ಯೋಜನೆ

ದೀಪ ಎನ್.

ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಸಂಸ್ಥೆ, ಮೈಸೂರು

**2022**

ಕರ್ನಾಟಕ ಸರ್ಕಾರ

Child Friendly Village

# ಗ್ರಾಮ ಪಂಚಾಯಿತಿ ಮಕ್ಕಳ ಅಭಿವೃದ್ಧಿ ಯೋಜನೆ

# ಗ್ರಾಮ ಪಂಚಾಯಿತಿ ಮಕ್ಕಳ ಅಭಿವೃದ್ಧಿ ಯೋಜನೆ

ಇಂದಿನ ಮಕ್ಕಳೇ ಮುಂದಿನ ಪ್ರಜೆಗಳು ಎಂಬ ನಾಣ್ನುಡಿ ಬದಲಾಗಿ ಇಂದಿನ ಮಕ್ಕಳೇ ಇಂದಿನ ಪ್ರಜೆಗಳು ಮಾತ್ರವಲ್ಲ ದೇಶದ ಇಂದಿನ ಭವಿಷ್ಯವಾಗಿದ್ದಾರೆ. ದೇಶದ ಭವಿಷ್ಯ ಸುಭದ್ರವಾಗಿರಬೇಕಾದರೆ ಇಂದಿನಿಂದಲೇ ಮಕ್ಕಳಲ್ಲಿ ದೇಶಭಕ್ತಿಯ ಜೊತೆಗೆ ಒಬ್ಬ ಪ್ರಜ್ಞಾವಂತ ಪ್ರಜೆಯಾಗಿ ರೂಪುಗೊಳ್ಳಲು ಅಗತ್ಯವಿರುವ ವಾತಾವರಣವನ್ನು ನಿರ್ಮಿಸಬೇಕಿದೆ. ಮಕ್ಕಳಿಗೆ ತಾವು ವಾಸಿಸುವ ಪರಿಸರವನ್ನು ಪ್ರೀತಿಸುವ ಸಂರಕ್ಷಿಸುವುದರ ಜೊತೆಗೆ, ಅವರು ನಿರ್ವಹಿಸಬೇಕಾದ ಕರ್ತವ್ಯ ಮತ್ತು ಹೊಣೆಗಾರಿಕೆಗಳ ಕುರಿತು ಅರಿವನ್ನು ಮೂಡಿಸಬೇಕು.

ಗ್ರಾಮ ಪಂಚಾಯಿತಿ ಹಂತದಲ್ಲಿ ಮಕ್ಕಳಿಗಾಗಿ ಅಭಿವೃದ್ಧಿ ಯೋಜನೆಯನ್ನು ಸಿದ್ಧಪಡಿಸುವ ಸಂದರ್ಭದಲ್ಲಿ ಪ್ರಥಮವಾಗಿ ಮಕ್ಕಳು ಎಂದರೆ ಯಾರು ಎಂಬುದನ್ನು ಅರ್ಥೈಸಿಕೊಳ್ಳುವುದು ಮುಖ್ಯವಾಗಿದೆ. ವಿಶ್ವ ಸಂಸ್ಥೆಯ ಯುನಿಸೆಫ್ ಸಂಸ್ಥೆಯಂತೆ ಆಗತಾನೆ ಜನಿಸಿದ ಮಗುವಿನಿಂದ 18 ವರ್ಷ ಪೂರ್ಣಗೊಳಿಸುವವರೆಗಿನ ಪ್ರತಿಯೊಬ್ಬ ಹೆಣ್ಣು ಮತ್ತು ಗಂಡು ಮಗುವನ್ನು ಮಕ್ಕಳು ಎಂದು ವ್ಯಾಖ್ಯಾನಿಸಿದೆ. ಯೋಜನೆಗಳನ್ನು ಸಿದ್ಧಪಡಿಸುವ ಸಂದರ್ಭದಲ್ಲಿ ಗ್ರಾಮದಲ್ಲಿ ವಾಸಿಸುವ ಎಲ್ಲಾ ಸಮುದಾಯದ ಮಕ್ಕಳು ಎದುರಿಸುವ ಸಾಮಾಜಿಕ, ಶೈಕ್ಷಣಿಕ, ಆರೋಗ್ಯ ಸಮಸ್ಯೆಗಳನ್ನು ಗಮನದಲ್ಲಿಟ್ಟುಕೊಂಡು ಎಲ್ಲರನ್ನು ಒಳಗೊಳ್ಳುವ ಯೋಜನೆಯನ್ನು ಸಿದ್ಧಪಡಿಸಬೇಕಿದೆ.

ಬಹುತೇಕ ಸಂದರ್ಭಗಳಲ್ಲಿ ಮಕ್ಕಳಿಗೆ ದೇಶದ ಸಂವಿಧಾನವು ನೀಡಿರುವ ಹಕ್ಕುಗಳ ಬಗ್ಗೆಯಾಗಲಿ ಅಥವಾ ಸರ್ಕಾರವು ನೀಡುತ್ತಿರುವ ಸೌಕರ್ಯಗಳ ಬಗ್ಗೆಯಾಗಲಿ ಅರಿವಿರುವುದಿಲ್ಲ. ಇವುಗಳನ್ನು ಮಕ್ಕಳಿಗೆ ತಿಳಿಸುವ ಹೊಣೆಗಾರಿಕೆ ಪೋಷಕರದ್ದಾಗಿದೆ ಮತ್ತು ಮಕ್ಕಳಿಗಾಗಿ ವಿಶೇಷ ಗ್ರಾಮಸಭೆಗಳನ್ನು ಆಯೋಜಿಸುವ ಹೊಣೆಗಾರಿಕೆ ಗ್ರಾಮ ಪಂಚಾಯಿತಿಯದ್ದಾಗಿದೆ. ಗ್ರಾಮ ಪಂಚಾಯಿತಿಯನ್ನು ಮಕ್ಕಳ ಸ್ನೇಹಿಯನ್ನಾಗಿಸುವ ಜವಾಬ್ದಾರಿ ಚುನಾಯಿತ ಪ್ರತಿನಿಧಿಗಳು, ಅಧಿಕಾರಿಗಳು, ಸಿಬ್ಬಂದಿಗಳು ಮತ್ತು ಸಾರ್ವಜನಿಕರದಾಗಿದೆ. ಗ್ರಾಮ ಪಂಚಾಯಿತಿಯ ಜೊತೆಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಶಿಕ್ಷಣ ಇಲಾಖೆಗಳು ನೇರವಾಗಿ ಮಕ್ಕಳ ಸ್ನೇಹಿ ಗ್ರಾಮ ಪಂಚಾಯಿತಿಯನ್ನಾಗಿ ಪರಿವರ್ತಿಸುವಲ್ಲಿ ಸಹಕರಿಸಬೇಕಿದೆ. ಯಾವುದೇ ಗ್ರಾಮವನ್ನು ಮಕ್ಕಳ ಸ್ನೇಹಿಯನ್ನಾಗಿಸಲು ಮಾಡಬೇಕಾದ ಕೆಲವೊಂದು ಅತ್ಯಂತ ಪ್ರಮುಖ ಕೆಲಸಗಳು ಈ ಕೆಳಗಿನಂತಿವೆ.

1. ಮಗುವು ಆರೋಗ್ಯವಾಗಿ ಜನಿಸುವ ದೃಷ್ಟಿಯಿಂದ ಮಹಿಳೆಯು ಗರ್ಭಿಣಿಯೆಂದು ಗುರುತಿಸಿದ ತಕ್ಷಣ ಅವರನ್ನು ಅಂಗನವಾಡಿಯಲ್ಲಿ ನೊಂದಾಯಿಸುವುದು. ಕುಟುಂಬವು ನೀಡುವ ಆಹಾರಧಾನ್ಯಗಳ ಜೊತೆಗೆ ಸರ್ಕಾರವು ನೀಡುವ ಪೂರಕ ಪೌಷ್ಠಿಕ ಆಹಾರವು ದೊರೆಯುವಂತೆ ನೋಡಿಕೊಳ್ಳುವುದು.
2. ಪ್ರತಿಯೊಬ್ಬ ಗರ್ಭಿಣಿಯು, ತಾಯಂದಿರ ಕಾರ್ಡನ್ನು ಹೊಂದುವುದು ಮತ್ತು ಅದರಂತೆ ಚುಚ್ಚುಮದ್ದು ಮತ್ತು ಲಸಿಕೆಗಳನ್ನು ಪಡೆದುಕೊಳ್ಳುವುದು.
3. ಗ್ರಾಮದ ಎಲ್ಲಾ ಮಕ್ಕಳು ಆಸ್ಪತ್ರೆಗಳಲ್ಲಿಯೇ ಜನಿಸುವಂತೆ ಪ್ರೋತ್ಸಾಹಿಸುವುದು.
4. ಜನಿಸಿದ ಎಲ್ಲಾ ಮಕ್ಕಳಿಗೆ ಕಡ್ಡಾಯವಾಗಿ ಇಂದ್ರಧನುಷ್- ಏಳು ಲಸಿಕೆ ಮತ್ತು ಚುಚ್ಚುಮದ್ದುಗಳನ್ನು ಹಾಕಿರುವುದನ್ನು ಖಾತರಿಪಡಿಸಿಕೊಳ್ಳುವುದು.
5. ಹೆಣ್ಣು ಮಗುವು ಜನಿಸಿದಾಗ ಸರ್ಕಾರವು ನೀಡುವ ಭಾಗ್ಯಲಕ್ಷ್ಮೀ-ಸುಕನ್ಯ ಸಮೃದ್ಧಿ ಯೋಜನೆಯ ಫಲಾನುಭವಿಗಳಾಗುವಂತೆ ಕ್ರಮವಹಿಸುವುದು.
6. 3 ವರ್ಷ ಮೇಲ್ಪಟ್ಟ ಎಲ್ಲಾ ಮಕ್ಕಳು ಕಡ್ಡಾಯವಾಗಿ ಅಂಗನವಾಡಿಗಳಿಗೆ ದಾಖಲಾಗುವಂತೆ ಗಮನಿಸುವುದು
7. ಅಂಗನವಾಡಿಗಳಿಂದ ಎಲ್ಲಾ ಮಕ್ಕಳು ಶಾಲೆಗೆ ದಾಖಲಾಗುವಂತೆ ಮತ್ತು ಶಾಲೆಯಲ್ಲಿಯೇ ಉಳಿಯುವಂತೆ ಕ್ರಮ ಕೈಗೊಳ್ಳುವುದು.

8. ಮಕ್ಕಳ ಸಹಾಯವಾಣಿಯ ಸಂಖ್ಯೆಗಳನ್ನು ಸಾರ್ವಜನಿಕ ಸ್ಥಳಗಳಲ್ಲಿ, ಶಾಲೆಗಳ ಗೋಡೆಗಳ ಮೇಲೆ ಬರೆಸುವುದು.
9. ಹಿರಿಯ ಪ್ರಾಥಮಿಕ ಶಾಲೆ ಮತ್ತು ಪ್ರೌಢಶಾಲೆಗಳಲ್ಲಿ ಹೆಣ್ಣು ಮಕ್ಕಳು ಶಾಲೆಯಿಂದ ಹೊರಗುಳಿಯುವುದನ್ನು ತಡೆಯಲು ಹೆಣ್ಣು ಮಕ್ಕಳಿಗೆ ಅಗತ್ಯವಿರುವ ಮೂಲಸೌಕರ್ಯಗಳನ್ನು ಕಲ್ಪಿಸಿಕೊಡುವುದು.
10. ಶಾಲೆಯಲ್ಲಿ ಮಕ್ಕಳಿಗೆ ನೀಡುವ ಶುಚಿ ಪ್ಯಾಡುಗಳು ಸಕಾಲದಲ್ಲಿ ಮಕ್ಕಳಿಗೆ ತಲುಪುವಂತೆ ಕ್ರಮವಹಿಸುವುದು.
11. ಹೆಣ್ಣು ಮಕ್ಕಳು ಹೆಚ್ಚಿರುವ ಶಾಲೆಗಳಲ್ಲಿ ಇನ್ಸಿನರೇಟರ್‌ಗಳನ್ನು ಅಳವಡಿಸಿ ನೈರ್ಮಲ್ಯವನ್ನು ಕಾಪಾಡುವುದು.
12. ಶಾಲೆಯಿಂದ ಹೊರಗುಳಿಯುವ ಮಕ್ಕಳನ್ನು ಮರಳಿಶಾಲೆಗೆ ಕಳುಹಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು
13. ಪಾಠ ಮತ್ತು ಪಠ್ಯೇತರ ಚಟುವಟಿಕೆಗಳಲ್ಲಿ ಗುರುತಿಸಿಕೊಂಡ ಮಕ್ಕಳನ್ನು ಗ್ರಾಮ ಪಂಚಾಯಿತಿಯಿಂದ ಪ್ರೋತ್ಸಾಹಿಸುವುದು
14. ಓದುವುದರಲ್ಲಿ ಮುಂದಿರುವ ಮಕ್ಕಳನ್ನು ಗುರುತಿಸಿ ಉನ್ನತ ಶಿಕ್ಷಣಕ್ಕೆ ಆರ್ಥಿಕ ಬೆಂಬಲ ನೀಡಿ ಪ್ರೋತ್ಸಾಹಿಸುವುದು
15. ಮಕ್ಕಳ ಮೇಲಾಗುವ ದೌರ್ಜನ್ಯಗಳು, ಬಾಲ ಕಾರ್ಮಿಕತೆ, ಬಾಲ್ಯ ವಿವಾಹ, ಲೈಂಗಿಕ ದೌರ್ಜನ್ಯ, ದೈಹಿಕ ಹಿಂಸೆಗಳ ಕುರಿತು ಶಾಲೆಗಳಲ್ಲಿ ಮತ್ತು ಕುಟುಂಬದ ಸದಸ್ಯರಿಗೆ ಗ್ರಾಮಸಭೆಗಳಲ್ಲಿ ತಿಳಿಸುವುದು ಮತ್ತು ಮಕ್ಕಳನ್ನು ಸುರಕ್ಷಿತರಾಗಿರುವಂತೆ ಕ್ರಮವಹಿಸುವುದು.
16. ಶಾಲೆಗಳಲ್ಲಿ ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ (ಎಸ್‌ಡಿಎಂಸಿ)ಯು ಸಕ್ರಿಯವಾಗಿ ಕಾರ್ಯ ನಿರ್ವಹಿಸುವಂತೆ ಕ್ರಮವಹಿಸುವುದು.
17. ಮಕ್ಕಳ ಕಳ್ಳಸಾಗಾಣಿಕೆ ತಡೆಗೆ ಇರುವ ಸಮಿತಿಗಳನ್ನು ಬಲಪಡಿಸುವುದು
18. ಗ್ರಾಮದಲ್ಲಿ ಮಕ್ಕಳ ಲಿಂಗಾನುಪಾತವು ಉತ್ತಮವಾಗಿರುವಂತೆ ನೋಡಿಕೊಳ್ಳುವುದು.
19. ಮಕ್ಕಳ ಹಕ್ಕುಗಳ ಕುರಿತು ಸಾರ್ವಜನಿಕ ಸ್ಥಳಗಳಲ್ಲಿ ಗೋಡೆ ಬರಹಗಳನ್ನು ಬರೆಸಿ ಜಾಗೃತಿ ಮೂಡಿಸುವುದು
20. ಮಕ್ಕಳ ಗ್ರಾಮಸಭೆಗಳನ್ನು ಆಯೋಜಿಸುವುದು ಮತ್ತು ತಜ್ಞರಿಂದ ಮಕ್ಕಳಿಗೆ ಮಾರ್ಗದರ್ಶನ ನೀಡುವುದು
21. ಶಿಕ್ಷಣವನ್ನು ಮುಂದುವರೆಸಲು ಮಾರ್ಗದರ್ಶನಕ್ಕಾಗಿ ಕೋರ್ಸುಗಳ ಆಯ್ಕೆಯನ್ನು ಪ್ರಜ್ಞಾವಂತರಾಗಿ ಮಾಡಲು ಮಕ್ಕಳಿಗೆ ಆಪ್ತ ಸಮಾಲೋಚನೆಯನ್ನು ಆಯೋಜಿಸುವುದು.

ಮಕ್ಕಳ ರಕ್ಷಣೆ ಮತ್ತು ಮಕ್ಕಳ ಹಕ್ಕುಗಳ ರಕ್ಷಣೆಗೆ ಸರ್ಕಾರವು ಕೈಗೊಂಡಿರುವ ಕಾರ್ಯಕ್ರಮಗಳ ಕುರಿತು ಸಾರ್ವಜನಿಕರಲ್ಲಿ ಅರಿವು ಮೂಡಿಸುವುದು ಇಂದಿನ ಅಗತ್ಯವಾಗಿದೆ. ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿಗಾಗಿ ಶ್ರಮಿಸುತ್ತಿರುವ ಇಲಾಖೆಗಳು ಮತ್ತವರ ಕಾರ್ಯಕ್ರಮಗಳ ಕುರಿತು ವ್ಯಾಪಕ ಪ್ರಚಾರವನ್ನು ಕೈಗೊಳ್ಳಬೇಕಿದೆ. ಪ್ರಮುಖವಾಗಿ ಗ್ರಾಮಮಟ್ಟದ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳ ಮಾಹಿತಿಯನ್ನು ಗ್ರಾಮ ಪಂಚಾಯಿತಿಯು ಹೊಂದಿರಬೇಕು ಮತ್ತು ಮಾಹಿತಿಯನ್ನು ಗೋಡೆಗಳಲ್ಲಿ ನಮೂದಿಸುವುದು. ಸ್ಥಳೀಯವಾಗಿ ಮಕ್ಕಳ ಹಕ್ಕುಗಳ ಸಂರಕ್ಷಣೆಗಾಗಿ ಹಾಗೂ ಸುರಕ್ಷತೆಗಾಗಿ ಕಾರ್ಯ ನಿರ್ವಹಿಸುತ್ತಿರುವ ಸ್ವಯಂ ಸೇವಾ ಸಂಸ್ಥೆಗಳೊಂದಿಗೆ ಉತ್ತಮ ಸಂಬಂಧ ಹೊಂದುವುದರೊಂದಿಗೆ ಮಕ್ಕಳ ಸ್ನೇಹಿ ಗ್ರಾಮ ಪಂಚಾಯಿತಿಯನ್ನಾಗಿಸುವುದು.

ನಮೂನೆಗಳು


- ನಮೂನೆ–1 ಮಕ್ಕಳ ಅಭಿವೃದ್ಧಿ ಯೋಜನೆ ವಿವರಣೆ — ಪುಟ ಸಂಖ್ಯೆ 67–80
- ನಮೂನೆ–2 ಮಕ್ಕಳ ಅಭಿವೃದ್ಧಿ ಗುರಿ ನಿಗದಿಪಡಿಸುವಿಕೆ — ಪುಟ ಸಂಖ್ಯೆ 81–86
- ನಮೂನೆ–3 ಮಕ್ಕಳ ಅಭಿವೃದ್ಧಿ ಪಂಚಾಯಿತಿ ಯೋಜನೆ — ಪುಟ ಸಂಖ್ಯೆ 87–88

# ಗ್ರಾಮ ಪಂಚಾಯಿತಿ ಮಕ್ಕಳ ಅಭಿವೃದ್ಧಿ ಯೋಜನೆ



| ಕ್ರಮ ಸಂಖ್ಯೆ | ಗುರುತಿಸಿರುವ ಸಮಸ್ಯೆ / ಅಂಶ | ವಿವರಣೆ | ಪ್ರಾಮುಖ್ಯತೆ | ಅನುಷ್ಠಾನಿಸಬೇಕಾದ ಚಟುವಟಿಕೆಗಳು | ಜವಾಬ್ದಾರಿಯುತ ಇಲಾಖೆಗಳು / ಪಂ.ರಾಜ್ ಸಂಸ್ಥೆಗಳು/ ಸಮುದಾಯ | ಇಲಾಖಾವಾರು ಯೋಜನೆಗಳು / ಅನುದಾನದ ಮೂಲಗಳು |
|---|---|---|---|---|---|---|
| 1. | ಸಮಗ್ರ ಶಿಶು ಅಭಿವೃದ್ಧಿ ಯೋಜನೆ ಫಲಾನುಭವಿಗಳು | ಬಡ ಮತ್ತು ದುರ್ಬಲ ವರ್ಗದ ಗರ್ಭಿಣಿ, ಹಾಲುಣಿಸುವ ತಾಯಂದಿರು, 0-6 ವರ್ಷದೊಳಗಿನ ಮಕ್ಕಳು ಮತ್ತು ಪ್ರೌಢಾವಸ್ಥೆಯ ಹೆಣ್ಣು ಮಕ್ಕಳಿಗೆ ಅಗತ್ಯ ಪೌಷ್ಠಿಕ ಆಹಾರವನ್ನು ಒದಗಿಸಿ ಅಪೌಷ್ಠಿಕತೆಯನ್ನು ನಿವಾರಿಸಿ ಶಿಶು ಮರಣ ಮತ್ತು ತಾಯಂದಿರ ಮರಣವನ್ನು ತಡೆಗಟ್ಟುವುದು. | 1. ಅಪೌಷ್ಠಿಕತೆ ಮತ್ತು ರಕ್ತ ಹೀನತೆಯು ಗ್ರಾಮೀಣ ಪ್ರದೇಶದ ಮಹಿಳೆ ಮತ್ತು ಮಕ್ಕಳಲ್ಲಿ ಕಂಡು ಬರುವ ಸಾಮಾನ್ಯ ಸಮಸ್ಯೆ.<br>2. ಅಪೌಷ್ಠಿಕತೆ ಇರುವ ಮಕ್ಕಳಲ್ಲಿ ವಯಸ್ಸಿಗೆ ತಕ್ಕ ತೂಕ ಮತ್ತು ಎತ್ತರ ಇಲ್ಲದೇ ಮಗುವು ಮಾನಸಿಕ ಮತ್ತು ದೈಹಿಕವಾಗಿ ಕುಂಠಿತ ಬೆಳವಣಿಗೆಯಾಗುತ್ತದೆ<br>3. ಗರ್ಭಿಣಿಯರು ಮತ್ತು ತಾಯಂದಿರಿಗೆ ಅಗತ್ಯ ಪೂರಕ ಪೌಷ್ಠಿಕ ಆಹಾರವನ್ನು ಒದಗಿಸುವುದರ ಮೂಲಕ ಸಮಸ್ಯೆಗಳನ್ನು ಪರಿಹರಿಸಬಹುದು.<br>4. 6 ಯಿಂದ 60 ತಿಂಗಳ ಮಕ್ಕಳಿಗೆ ಪೂರಕ ಪೌಷ್ಠಿಕ ಆಹಾರ ಒದಗಿಸುವುದು<br>5. ಪ್ರೌಢಾವಸ್ಥೆಯ ಹೆಣ್ಣು ಮಕ್ಕಳಿಗೆ ಪೂರಕ ಪೌಷ್ಠಿಕ ಆಹಾರವನ್ನು ಒದಗಿಸುವುದು. | 1. ಅಂಗನವಾಡಿ ಕೇಂದ್ರದಲ್ಲಿ ಗರ್ಭಿಣಿಯರು, ತಾಯಂದಿರು, ಮಕ್ಕಳು ಮತ್ತು ಪ್ರೌಢಾವಸ್ಥೆಯ ಹೆಣ್ಣುಮಕ್ಕಳ ದತ್ತಾಂಶವನ್ನು ನಿರ್ವಹಿಸುವುದು<br>2. ಅಗತ್ಯ ಪೂರಕ ಪೌಷ್ಠಿಕ ಆಹಾರವನ್ನು ಕ್ರಮಬದ್ಧವಾಗಿ ಒದಗಿಸುವುದು<br>3. ಆರೋಗ್ಯ ಇಲಾಖೆಯ ಸಹಭಾಗಿತ್ವದೊಂದಿಗೆ ಗರ್ಭಿಣಿಯರು ಮತ್ತು ಮಕ್ಕಳ ಆರೋಗ್ಯ ತಪಾಸಣೆ<br>4. ಆಶಾ ಕಾರ್ಯಕರ್ತೆಯ ಸಹಯೋಗದಲ್ಲಿ ಸಾಂಸ್ಥಿಕ ಹೆರಿಗೆಯನ್ನು ಪ್ರೋತ್ಸಾಹಿಸುವುದು. | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಆರೋಗ್ಯ ಇಲಾಖೆ, ಗ್ರಾಮ ಪಂಚಾಯಿತಿ, | ಕೇಂದ್ರ ಮತ್ತು ರಾಜ್ಯ ಪುರಸ್ಕೃತ ಯೋಜನೆಗಳು, ಪಂಚಾಯತ್ ರಾಜ್ ಸಂಸ್ಥೆಗಳ ಅನುದಾನ. |

| ...ಖ್ಯೆ | ಗುರುತಿಸಿರುವ ಸಮಸ್ಯೆ / ಅಂಶ | ವಿವರಣೆ | ಪ್ರಾಮುಖ್ಯತೆ | ಅನುಷ್ಠಾನಿಸಬೇಕಾದ ಚಟುವಟಿಕೆಗಳು | ಜವಾಬ್ದಾರಿಯುತ ಇಲಾಖೆಗಳು / ಪಂ.ರಾಜ್ ಸಂಸ್ಥೆಗಳು/ ಸಮುದಾಯ | ಅಲಾಖಾವಾರು ಯೋಜನೆಗಳು / ಅನುದಾನದ ಮೂಲಗಳು |
|---|---|---|---|---|---|---|
| 2. | 0–3 ವರ್ಷದೊಳಗಿನ ಮಕ್ಕಳಲ್ಲಿ ಸಮಗ್ರ ಶಿಶು ಅಭಿವೃದ್ಧಿ ಯೋಜನೆಯಡಿ ಸೌಲಭ್ಯ ಪಡೆಯುತ್ತಿರುವ ಫಲಾನುಭವಿಗಳ ಸಂಖ್ಯೆ | ಬಡ ಮತ್ತು ದುರ್ಬಲ ವರ್ಗದವರಲ್ಲಿ ಸಮಗ್ರ ಶಿಶು ಅಭಿವೃದ್ಧಿ ಯೋಜನೆಯಡಿ ವಿವಿಧ ಸೌಲಭ್ಯಗಳನ್ನು ಪಡೆದುಕೊಳ್ಳುತ್ತಿರುವವರ 0–3 ವರ್ಷದೊಳಗಿನವರು | 1. ಅಪೌಷ್ಠಿಕತೆ ಗ್ರಾಮೀಣ ಪ್ರದೇಶದ ಮಕ್ಕಳಲ್ಲಿ ಹೆಚ್ಚಾಗಿ ಕಂಡು ಬರುತ್ತದೆ.<br>2. ಗರ್ಭಿಣಿಯರು ಮತ್ತು ತಾಯಂದಿರಿಗೆ ಅಗತ್ಯ ಪೂರಕ ಪೌಷ್ಠಿಕ ಆಹಾರವನ್ನು ಒದಗಿಸುವುದರ ಮೂಲಕ ಸಮಸ್ಯೆಗಳನ್ನು ಪರಿಹರಿಸಬಹುದು.<br>3. 0 ಯಿಂದ 36 ತಿಂಗಳ ಮಕ್ಕಳಿಗೆ ಪೂರಕ ಪೌಷ್ಠಿಕ ಆಹಾರವನ್ನು ಒದಗಿಸುವುದು. | 1. ಸ್ತನ್ಯ ಪಾನ ಸಪ್ತಾಹ ಕಾರ್ಯಕ್ರಮದ ಮೂಲಕ ತಾಯಂದಿರಿಗೆ ಎದೆಹಾಲುಣಿಸುವುದರ ಮಹತ್ವದ ಬಗ್ಗೆ ಅರಿವು ಮೂಡಿಸುವುದು.<br>2. 0 ಯಿಂದ 3 ವರ್ಷದ ಮಕ್ಕಳಿಗೆ ಪೂರಕ ಪೌಷ್ಠಿಕ ಆಹಾರ ಒದಗಿಸುವುದು.<br>3. ನಿಗದಿತ ಸಮಯಕ್ಕೆ ಚುಚ್ಚು ಮದ್ದು ಮತ್ತು ಆರೋಗ್ಯ ತಪಾಸಣೆ. | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಆರೋಗ್ಯ ಇಲಾಖೆ ಗ್ರಾಮ ಪಂಚಾಯಿತಿ | ಕೇಂದ್ರ ಮತ್ತು ರಾಜ್ಯ ಪುರಸ್ಕೃತ ಯೋಜನೆಗಳು, ಪಂಚಾಯತ್ ರಾಜ್ ಸಂಸ್ಥೆಗಳ ಅನುದಾನ. |
| 3. | 3–6 ವರ್ಷದೊಳಗಿನ ಸಮಗ್ರ ಶಿಶು ಅಭಿವೃದ್ಧಿ ಯೋಜನೆಯಡಿ ಸೌಲಭ್ಯ ಪಡೆಯುತ್ತಿರುವವರ ಸಂಖ್ಯೆ | ಬಡ ಮತ್ತು ದುರ್ಬಲ ವರ್ಗದ 3–6 ವರ್ಷದೊಳಗಿನ ಮಕ್ಕಳುಗಳ ವಿವರ | 1. ವಯಸ್ಸಿಗೆ ತಕ್ಕ ತೂಕ ಮತ್ತು ಎತ್ತರ ಇಲ್ಲದೇ ಮಗುವಿನ ಮಾನಸಿಕ ಮತ್ತು ದೈಹಿಕ ಬೆಳವಣಿಗೆ ಕುಂಠಿತಗೊಳ್ಳುತ್ತದೆ.<br>2. ಅಂಗನವಾಡಿಯಲ್ಲಿ ನೀಡುವ ಪೂರಕ ಪೌಷ್ಠಿಕ ಆಹಾರ ಮತ್ತು ತೀವ್ರ ಅಪೌಷ್ಠಿಕತೆಗೆ ಗುರಿಯಾದವರಿಗೆ ಹೆಚ್ಚುವರಿ ಮೊಟ್ಟೆ, ಚಿಕ್ಕಿ ನೀಡುವುದು.<br>3. ನಿರಂತರ ಆರೋಗ್ಯ ತಪಾಸಣೆ ಮಾಡಿಸುವುದು. | 1. 3 ರಿಂದ 6 ವರ್ಷದೊಳಗಿನ ಮಕ್ಕಳನ್ನು ಅಂಗನವಾಡಿಗೆ ದಾಖಲಿಸುವುದು.<br>2. 3 ರಿಂದ 6 ವರ್ಷದೊಳಗಿನ ಮಕ್ಕಳಿಗೆ ಅಗತ್ಯ ಪೂರಕ ಪೌಷ್ಠಿಕ ಆಹಾರ ಒದಗಿಸುವುದು.<br>3. ಅಂಗನವಾಡಿಗಳಲ್ಲಿ ಪೌಷ್ಠಿಕ ತೋಟಗಳನ್ನು ನಿರ್ಮಿಸುವುದು.<br>4. ನಿಗದಿತ ಸಮಯಕ್ಕೆ ಚುಚ್ಚು ಮದ್ದು ಮತ್ತು ಆರೋಗ್ಯ ತಪಾಸಣೆ | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಆರೋಗ್ಯ ಇಲಾಖೆ, ಗ್ರಾಮ ಪಂಚಾಯಿತಿ, | ಕೇಂದ್ರ ಮತ್ತು ರಾಜ್ಯ ಪುರಸ್ಕೃತ ಯೋಜನೆಗಳು, ಪಂಚಾಯತ್ ರಾಜ್ ಸಂಸ್ಥೆಗಳ ಅನುದಾನ. |

| [illegible] | ಗುರುತಿಸಿರುವ ಸಮಸ್ಯೆ / ಅಂಶ | ವಿವರಣೆ | ಪ್ರಾಮುಖ್ಯತೆ | ಅನುಷ್ಠಾನಿಸಬೇಕಾದ ಚಟುವಟಿಕೆಗಳು | ಜವಾಬ್ದಾರಿಯುತ ಇಲಾಖೆಗಳು / ಪಂ.ರಾಜ್ ಸಂಸ್ಥೆಗಳು/ ಸಮುದಾಯ | ಇಲಾಖಾವಾರು ಯೋಜನೆಗಳು / ಅನುದಾನದ ಮೂಲಗಳು |
|---|---|---|---|---|---|---|
| | ಗರ್ಭಿಣಿಯರು ಮತ್ತು ಹಾಲುಣಿಸುವ ತಾಯಂದಿರಲ್ಲಿ – ಸಮಗ್ರ ಶಿಶು ಅಭಿವೃದ್ಧಿ ಯೋಜನೆಯಡಿ ಸೌಲಭ್ಯ ಪಡೆಯುತ್ತಿರುವವರ ಸಂಖ್ಯೆ | ಬಡ ಮತ್ತು ದುರ್ಬಲ ವರ್ಗದ ಗರ್ಭಿಣಿಯರಿಗೆ ಮತ್ತು ಹಾಲುಣಿಸುವ ತಾಯಂದಿರಿಗೆ ಅಗತ್ಯ ಹೆಚ್ಚುವರಿ ಪೂರಕ ಪೌಷ್ಟಿಕ ಆಹಾರವನ್ನು ಪೂರೈಸುವುದು | 1. ಅಪೌಷ್ಟಿಕತೆ ಮತ್ತು ರಕ್ತ ಹೀನತೆಯು ಗ್ರಾಮೀಣ ಪ್ರದೇಶದ ಮಹಿಳೆಯರಲ್ಲಿ ಸಾಮಾನ್ಯ ಸಮಸ್ಯೆಗಳಲ್ಲಿ ಒಂದು.<br>2. ಗರ್ಭಿಣಿಯರು ಮತ್ತು ತಾಯಂದಿರಿಗೆ ಅಗತ್ಯ ಪೂರಕ ಪೌಷ್ಟಿಕ ಆಹಾರವನ್ನು ಒದಗಿಸುವುದರ ಮೂಲಕ ಸಮಸ್ಯೆಗಳನ್ನು ಪರಿಹರಿಸಬಹುದು.<br>3. ನಿರಂತರ ಆರೋಗ್ಯ ತಪಾಸಣೆಯಿಂದ ಸಂಭವಿಸಬಹುದಾದ ತೊಂದರೆಗಳನ್ನು ನಿವಾರಿಸಬಹುದು. | 1. ಗರ್ಭಧಾರಣೆಯಾದ ಸಂದರ್ಭದಲ್ಲಿ ಕನಿಷ್ಠ 4 ಬಾರಿ ಆರೋಗ್ಯ ತಪಾಸಣೆ ಮಾಡಿಸಿರುವುದನ್ನು ಖಚಿತಪಡಿಸಿಕೊಳ್ಳುವುದು.<br>2. ಕಡ್ಡಾಯ ಸಾಂಸ್ಥಿಕ ಹೆರಿಗೆಯನ್ನು ಪ್ರೋತ್ಸಾಹಿಸುವುದು.<br>3. ಮಾತೃತ್ವ ವಂದನಾ ಕಾರ್ಯಕ್ರಮ, ಮಾತೃಪೂರ್ಣ, ಜನನಿ ಸುರಕ್ಷಾ ಯೋಜನೆಯ ಸೌಲಭ್ಯವನ್ನು ಅರ್ಹರಿಗೆ ತಲುಪಿಸುವುದು.<br>4. ಪೂರಕ ಪೌಷ್ಟಿಕ ಆಹಾರವನ್ನು ಒದಗಿಸುವುದು. | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಆರೋಗ್ಯ ಇಲಾಖೆ, ಗ್ರಾಮ ಪಂಚಾಯಿತಿ | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅನುದಾನ, ಆರೋಗ್ಯ ಇಲಾಖೆ, ಗ್ರಾಮ ಪಂಚಾಯಿತಿ, ಪಂಚಾಯತ್ ರಾಜ್ ಸಂಸ್ಥೆಗಳ ಅನುದಾನ. |
| 5. | ಎತ್ತರಕ್ಕೆ ತಕ್ಕ ತೂಕವಿಲ್ಲದ (ವೇಸ್ಟೆಡ್) ಮಕ್ಕಳು | ವೇಸ್ಟೆಡ್ ಮಕ್ಕಳೆಂದರೆ ವಯಸ್ಸಿಗೆ ಅನುಸಾರವಾಗಿ ಎತ್ತರಕ್ಕೆ ತಕ್ಕ ತೂಕವಿಲ್ಲದ ಮಕ್ಕಳು | 1. ವೇಸ್ಟೆಡ್ ಮಕ್ಕಳನ್ನು ಚಿಕ್ಕ ವಯಸ್ಸಿನಲ್ಲೇ ಗುರುತಿಸುವುದರಿಂದ ಆರೋಗ್ಯ ಸಂಬಂಧಿತ ಸಮಸ್ಯೆಗಳನ್ನು ಪರಿಹರಿಸಲು ಸಹಕಾರಿ.<br>2. ಹೆಚ್ಚುವರಿ ಪೂರಕ ಪೌಷ್ಟಿಕ ಆಹಾರ ಒದಗಿಸಿ ದೈಹಿಕ ಮತ್ತು ಮಾನಸಿಕ ನ್ಯೂನತೆಗಳನ್ನು ನಿವಾರಿಸಬಹುದು. | 1. ಗರ್ಭಿಣಿ ಮಹಿಳೆಯರ ಕುಟುಂಬದ ಆರೋಗ್ಯ ಮತ್ತು ಆರ್ಥಿಕ ಸ್ಥಿತಿಗತಿಗಳನ್ನು ಗಮನಿಸುವುದು.<br>2. ತಾಯಂದಿರ ಸಭೆಗಳು ಹಾಗೂ ಇತರೆ ಸಭೆಗಳಲ್ಲಿ ಮಕ್ಕಳು ವೇಸ್ಟೆಡ್ ಸಮಸ್ಯೆ ಇದ್ದಲ್ಲಿ ಉಂಟಾಗುವ ಆರೋಗ್ಯ ಸಮಸ್ಯೆಗಳ ಕುರಿತು ಅರಿವು ಮೂಡಿಸುವುದು.<br>3. ದಾನಿಗಳಿಂದ ಹೆಚ್ಚಿನ ಪೂರಕ ಪೌಷ್ಟಿಕ ಆಹಾರವನ್ನು ಮಕ್ಕಳಿಗೆ ಕೊಡಿಸುವುದು. | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಆರೋಗ್ಯ ಇಲಾಖೆ, ಗ್ರಾಮ ಪಂಚಾಯಿತಿ, | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅನುದಾನ, ಆರೋಗ್ಯ ಇಲಾಖೆ, ಗ್ರಾಮ ಪಂಚಾಯಿತಿ, ಪಂಚಾಯತ್ ರಾಜ್ ಸಂಸ್ಥೆಗಳ ಅನುದಾನ. |

| ಕ್ರಮ ಸಂಖ್ಯೆ | ಗುರುತಿಸಿರುವ ಸಮಸ್ಯೆ / ಅಂಶ | ವಿವರಣೆ | ಪ್ರಾಮುಖ್ಯತೆ | ಅನುಷ್ಠಾನಿಸಬೇಕಾದ ಚಟುವಟಿಕೆಗಳು | ಜವಾಬ್ದಾರಿಯುತ ಇಲಾಖೆಗಳು / ಪಂ.ರಾಜ್ ಸಂಸ್ಥೆಗಳು/ ಸಮುದಾಯ | ಇಲಾಖಾವಾರು ಯೋಜನೆಗಳು / ಅನುದಾನದ ಮೂಲಗಳು |
|---|---|---|---|---|---|---|
| 6. | ಮಕ್ಕಳಲ್ಲಿ ರಕ್ತ ಹೀನತೆ– (ಆಹಾರ ಭದ್ರತಾ ಕಾರ್ಯಕ್ರಮ) | ರಕ್ತ ಹೀನತೆಯೆಂದರೆ ವ್ಯಕ್ತಿಯಲ್ಲಿ ಕನಿಷ್ಠ 11.50 ಗ್ರಾಂ/ ಹಿಮೋಗ್ಲೋಬಿನ್ ಅಂಶ ಇಲ್ಲದಿರುವ ಮಕ್ಕಳು | 1. ಗರ್ಭಿಣಿಯರಿಗೆ ಅಗತ್ಯ ಆಹಾರವನ್ನು ಒದಗಿಸುವುದರಿಂದ ಆರೋಗ್ಯವಂತ ಮಕ್ಕಳು ಜನಿಸುತ್ತಾರೆ.<br>2. ಮಗುವಿಗೆ ಮನೆಯಲ್ಲಿ ಮತ್ತು ಅಂಗನವಾಡಿಗಳಲ್ಲಿ ಅಗತ್ಯ ಆಹಾರ ಸೌಲಭ್ಯಗಳನ್ನು ಕಲ್ಪಿಸುವುದು.<br>3. ಮಕ್ಕಳಿಗೆ ಆಹಾರವನ್ನು ನಿಗಧಿತವಾಗಿ ನೀಡುವುದು ಮತ್ತು ಆರೋಗ್ಯ ತಪಾಸಣೆ ಮಾಡುವುದು. | 1. ಗರ್ಭಿಣಿ ಮಹಿಳೆಯರ ಕುಟುಂಬದ ಆರೋಗ್ಯ ಮತ್ತು ಆರ್ಥಿಕ ಸ್ಥಿತಿಗತಿಗಳನ್ನು ಗಮನಿಸುವುದು.<br>2. ತಾಯಂದಿರ ಸಭೆಗಳು ಹಾಗೂ ಇತರೆ ಸಭೆಗಳಲ್ಲಿ ಮಕ್ಕಳಲ್ಲಿ ರಕ್ತ ಹೀನತೆಯಿಂದ ಉಂಟಾಗುವ ಸಮಸ್ಯೆಗಳ ಅರಿವು ಮೂಡಿಸುವುದು.<br>3. ದಾನಿಗಳಿಂದ ಹೆಚ್ಚಿನ ಪೂರಕ ಪೌಷ್ಠಿಕ ಆಹಾರವನ್ನು ಮಕ್ಕಳಿಗೆ ಕೊಡಿಸುವುದು.<br>4. ಮಕ್ಕಳಿಗೆ ಆಗಿಂದಾಗ್ಗೆ ಆರೋಗ್ಯ ತಪಾಸಣೆ ಮಾಡಿಸುವುದು. | 1. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ.<br>2. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ.<br>3. ಶಿಕ್ಷಣ ಇಲಾಖೆ.<br>4. ಗ್ರಾಮ ಪಂಚಾಯಿತಿ. | 1. ಕೇಂದ್ರ ಮತ್ತು ರಾಜ್ಯ ಪ್ರಾಯೋಜಿತ ಕಾರ್ಯಕ್ರಮಗಳ ಅನುದಾನ.<br>2. ಗ್ರಾಮ ಪಂಚಾಯಿತಿ ಅನುದಾನ. |
| 7. | ಪ್ರೌಢಾವಸ್ಥೆಯ ಮಕ್ಕಳು (ಆಹಾರ ಭದ್ರತಾ ಕಾಯಿದೆ 2013) | ರಕ್ತ ಹೀನತೆಯೆಂದರೆ ವ್ಯಕ್ತಿಯಲ್ಲಿ ಕನಿಷ್ಠ 11.50 ಗ್ರಾಂ/ ಹಿಮೋಗ್ಲೋಬಿನ್ ಅಂಶ ಇಲ್ಲದಿರುವ ಪ್ರೌಢಾವಸ್ಥೆಯ ಹೆಣ್ಣು ಮಕ್ಕಳು | 1. ದೇಶದ ಸರಿಸುಮಾರು ಶೇ.50ರಷ್ಟು ಜನಸಂಖ್ಯೆ ರಕ್ತ ಹೀನತೆಯಿಂದ ಬಳಲುತ್ತಿದೆ<br>2. ಪ್ರೌಢಾವಸ್ಥೆ ತಲುಪುವ ಹೆಣ್ಣುಮಕ್ಕಳಲ್ಲಿ ರಕ್ತಸ್ರಾವದಿಂದಾಗಿ ರಕ್ತ ಹೀನತೆ ಹೆಚ್ಚು.<br>3. ಋತುಸ್ರಾವದ ಕೊರತೆಯಿಂದ ಹೆಚ್ಚಿನ ಸಮಸ್ಯೆಗಳು ಉದ್ಭವಿಸಬಹುದು.<br>4. ಪ್ರೌಢಾವಸ್ಥೆಯ ಮಕ್ಕಳ ದೇಹದಲ್ಲಾಗುವ ಬದಲಾವಣೆಗಳು ಮಕ್ಕಳನ್ನು ಗೊಂದಲಕ್ಕೆ ದೂಡಿ ಒತ್ತಡ ಸೃಷ್ಟಿಸುತ್ತವೆ. | 1. ಶಾಲೆಗಳಲ್ಲಿ ನೀಡುವ ಮಧ್ಯಾಹ್ನದ ಬಿಸಿಯೂಟದಲ್ಲಿ ತರಕಾರಿಗಳನ್ನು ಬಳಸುವಂತೆ ಕ್ರಮ ವಹಿಸುವುದು<br>2. ರಕ್ತ ಹೀನತೆಯಿಂದ ಬಳಲುತ್ತಿರುವ ಮಕ್ಕಳಿಗೆ ಕಬ್ಬಿಣಾಂಶದ ಮಾತ್ರೆಗಳನ್ನು ನೀಡುವುದು. ಮತ್ತು ಬಳಸುವುದನ್ನು ಖಾತ್ರಿ ಪಡಿಸುವುದು.<br>3. ರಕ್ತ ಹೀನತೆಯಿಂದ ಬಳಲುತ್ತಿರುವ ಕಿಶೋರಿಯರಿಗೆ ಅಂಗನವಾಡಿ ಕೇಂದ್ರಗಳಿಂದ ಪೂರಕ ಪೌಷ್ಠಿಕ ಆಹಾರ ನೀಡುವುದು.<br>4. ಗ್ರಾಮ ಪಂಚಾಯತಿಯಿಂದ ಶಾಲಾ ಆವರಣದಲ್ಲಿ ಪೌಷ್ಠಿಕ ತೋಟ ನಿರ್ಮಿಸಿ ಮಕ್ಕಳ ಬಿಸಿಯೂಟದಲ್ಲಿ ಬಳಸುವುದು. | 1. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ.<br>2. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ.<br>3. ಶಿಕ್ಷಣ ಇಲಾಖೆ.<br>4. ಗ್ರಾಮ ಪಂಚಾಯಿತಿ. | 1. ಕೇಂದ್ರ ಮತ್ತು ರಾಜ್ಯ ಪ್ರಾಯೋಜಿತ ಕಾರ್ಯಕ್ರಮಗಳ ಅನುದಾನ.<br>2. ಶಿಕ್ಷಣ ಇಲಾಖೆಯ ಅನುದಾನ.<br>3. ಗ್ರಾಮ ಪಂಚಾಯಿತಿ ಅನುದಾನ. |

| ಖ್ಯೆ | ಗುರುತಿಸಿರುವ ಸಮಸ್ಯೆ / ಅಂಶ | ವಿವರಣೆ | ಪ್ರಾಮುಖ್ಯತೆ | ಅನುಷ್ಠಾನಿಸಬೇಕಾದ ಚಟುವಟಿಕೆಗಳು | ಜವಾಬ್ದಾರಿಯುತ ಇಲಾಖೆಗಳು / ಪಂ.ರಾಜ್ ಸಂಸ್ಥೆಗಳು/ ಸಮುದಾಯ | ಇಲಾಖಾವಾರು ಯೋಜನೆಗಳು / ಅನುದಾನದ ಮೂಲಗಳು |
|---|---|---|---|---|---|---|
| | | | | 5. ಪ್ರೌಢಾವಸ್ಥೆಯಲ್ಲಿ ಮಕ್ಕಳು ಎದುರಿಸುವ ಸಮಸ್ಯೆಗಳು ಮತ್ತು ಸವಾಲುಗಳ ಕುರಿತು ಮಹಿಳಾ ಗ್ರಾಮಸಭೆ, ಮಕ್ಕಳ ಹಕ್ಕುಗಳ ವಿಶೇಷ ಗ್ರಾಮಸಭೆ, ಇತರೆ ಗ್ರಾಮಸಭೆಗಳು, ಹಾಗೂ ತಾಯಂದಿರ ಸಭೆಗಳು, ಸ್ವಸಹಾಯ ಸಂಘದ ಸಭೆಗಳಲ್ಲಿ ಮಾಹಿತಿ ನೀಡುವುದು. | | |
| 8. | 15 ರಿಂದ 19 ವರ್ಷದೊಳಗಿನ ಹೆಣ್ಣು ಮಕ್ಕಳುಗಳು | ರಕ್ತ ಹೀನತೆಯೆಂದರೆ ವ್ಯಕ್ತಿಯಲ್ಲಿ ಕನಿಷ್ಠ 11.50 ಗ್ರಾಂ/ ಹಿಮೋಗ್ಲೋಬಿನ್ ಅಂಶ ಇಲ್ಲದಿರುವ 15 ರಿಂದ 19 ವರ್ಷದೊಳಗಿನ ಹೆಣ್ಣು ಮಕ್ಕಳುಗಳು | 1. ಪ್ರೌಢಾವಸ್ಥೆ ತಲುಪಿದ ಹೆಣ್ಣುಮಕ್ಕಳಲ್ಲಿ ರಕ್ತಹೀನತೆ ಸಂಭವಿಸುವ ಪ್ರಮಾಣ ಹೆಚ್ಚಿರುವುದರಿಂದ ಅಗತ್ಯ ಪೂರಕ ಪೌಷ್ಠಿಕ ಆಹಾರ ಮತ್ತು ಔಷಧಿಗಳ ಜೊತೆಗೆ ವೈಯಕ್ತಿಕ ಸ್ವಚ್ಛತೆಗೆ ಹೆಚ್ಚಿನ ಆದ್ಯತೆ ನೀಡುವುದು.<br>2. ಕಾನೂನಿನಂತೆ ವಿವಾಹದ ವಯಸ್ಸು 18 ವರ್ಷವಿರುವುದರಿಂದ ಈ ವಯಸ್ಸಿನ ಮಕ್ಕಳಿಗೆ ಹೆಚ್ಚಿನ ಆರೈಕೆಯ ಅಗತ್ಯವಿದೆ<br>3. 18 ವರ್ಷದ ಮಗು ವಿವಾಹವಾಗಿ ಗರ್ಭಧರಿಸುವ ಸಂಭವ ಹೆಚ್ಚಿರುತ್ತದೆ.<br>4. ಅಗತ್ಯ ಮಾಹಿತಿಯ ಜೊತೆಗೆ ಹೆಚ್ಚಿನ ಪೂರಕ ಪೌಷ್ಠಿಕ ಆಹಾರದ ಅಗತ್ಯವಿದೆ. | 1. ಶಾಲೆಗಳಲ್ಲಿ ನಡೆಯುವ ಪೋಷಕರ ಸಭೆಗಳಲ್ಲಿ ಕಿಶೋರಿಯರು ಭಾಗವಹಿಸುವುದು.<br>2. ರಕ್ತ ಹೀನತೆಯಿಂದ ಬಳಲುತ್ತಿರುವ ಮಕ್ಕಳಿಗೆ ಕಬ್ಬಿಣಾಂಶದ ಮಾತ್ರೆಗಳನ್ನು ನೀಡುವುದು. ಮತ್ತು ಬಳಸುವುದನ್ನು ಖಾತ್ರಿ ಪಡಿಸುವುದು.<br>3. ರಕ್ತ ಹೀನತೆಯಿಂದ ಬಳಲುತ್ತಿರುವ ಕಿಶೋರಿಯರಿಗೆ ಅಂಗನವಾಡಿ ಕೇಂದ್ರಗಳಿಂದ ಪೂರಕ ಪೌಷ್ಠಿಕ ಆಹಾರ ನೀಡುವುದು.<br>4. ಮನೆಗಳಲ್ಲಿ ಹಣ್ಣು ತರಕಾರಿಗಳ ಕೈತೋಟವನ್ನು ನಿರ್ಮಿಸಲು ನೆರವು ನೀಡುವುದು<br>5. ರಕ್ತ ಹೀನತೆಯಿಂದಾಗುವ ಕೆಟ್ಟ ಪರಿಣಾಮಗಳ ಕುರಿತು ಮಹಿಳಾ ಗ್ರಾಮಸಭೆ, ಮಕ್ಕಳ ಹಕ್ಕುಗಳ ವಿಶೇಷ ಗ್ರಾಮಸಭೆ, ಇತರೆ ಗ್ರಾಮಸಭೆಗಳು, ಹಾಗೂ ತಾಯಂದಿರ ಸಭೆಗಳು, ಸ್ವಸಹಾಯ ಸಂಘದ ಸಭೆಗಳಲ್ಲಿ ಮಾಹಿತಿ ನೀಡುವುದು. | 1. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ,<br>2. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,<br>3. ಪ್ರೌಢ ಮತ್ತು ಕಾಲೇಜು ಶಿಕ್ಷಣ ಇಲಾಖೆ,<br>4. ಗ್ರಾಮ ಪಂಚಾಯಿತಿ, / ತಾಲ್ಲೂಕು ಪಂಚಾಯತ್/ ಜಿಲ್ಲಾ ಪಂಚಾಯತ್. | 1. ಕೇಂದ್ರ ಮತ್ತು ರಾಜ್ಯ ಪ್ರಾಯೋಜಿತ ಕಾರ್ಯಕ್ರಮಗಳ ಅನುದಾನ.<br>2. ಪ್ರೌಢ ಮತ್ತು ಕಾಲೇಜು ಶಿಕ್ಷಣ ಇಲಾಖೆ,<br>3. ಗ್ರಾಮ ಪಂಚಾಯಿತಿ, / ತಾಲ್ಲೂಕು ಪಂಚಾಯತ್/ ಜಿಲ್ಲಾ ಪಂಚಾಯತ್. |

| [illegible] | ಗುರುತಿಸಿರುವ ಸಮಸ್ಯೆ / ಅಂಶ | ವಿವರಣೆ | ಪ್ರಾಮುಖ್ಯತೆ | ಅನುಷ್ಠಾನಿಸಬೇಕಾದ ಚಟುವಟಿಕೆಗಳು | ಜವಾಬ್ದಾರಿಯುತ ಇಲಾಖೆಗಳು / ಪಂ.ರಾಜ್ ಸಂಸ್ಥೆಗಳು/ ಸಮುದಾಯ | ಇಲಾಖಾವಾರು ಯೋಜನೆಗಳು / ಅನುದಾನದ ಮೂಲಗಳು |
|---|---|---|---|---|---|---|
| | ಶಾಲಾ ಪೂರ್ವ ಶಿಕ್ಷಣ | ಮಕ್ಕಳು ಶಾಲೆಗೆ ದಾಖಲಾಗುವ ವಯಸ್ಸಿನ ಪೂರ್ವದಲ್ಲಿ ಶಿಕ್ಷಣ ವ್ಯವಸ್ಥೆಯನ್ನು ಪರಿಚಯಿಸುವ ಮತ್ತು ಪೌಷ್ಟಿಕ ಆಹಾರವನ್ನು ಒದಗಿಸುವುದು. (3–6 ವರ್ಷದೊಳಗಿನ ಮಕ್ಕಳು) | 1. ಶಿಕ್ಷಣ ವ್ಯವಸ್ಥೆಯನ್ನು ಮಕ್ಕಳಿಗೆ ಪರಿಚಯಿಸುವುದರ ಮೂಲಕ ಮಕ್ಕಳನ್ನು ಮಾನಸಿಕವಾಗಿ ಸಿದ್ಧಗೊಳಿಸುವುದು.<br>2. ಪೂರಕ ಪೌಷ್ಟಿಕ ಆಹಾರದ ಮೂಲಕ ಅಪೌಷ್ಟಿಕತೆಯನ್ನು ಹೋಗಲಾಡಿಸಬಹುದು.<br>3. ಅಂಗನವಾಡಿ ಕೇಂದ್ರಗಳಿಗೆ ಬರುವ ಮಕ್ಕಳಿಗೆ ನಿರಂತರ ಆರೋಗ್ಯ ತಪಾಸಣೆ ಮಾಡುವುದರಿಂದ ಮಕ್ಕಳಲ್ಲಿ ಉತ್ತಮ ಆರೋಗ್ಯವನ್ನು ಖಾತ್ರಿ ಪಡಿಸಬಹುದು.<br>4. ಮಕ್ಕಳು ಇತರೆ ಮಕ್ಕಳೊಂದಿಗೆ ಬೆರೆತು ಕಲಿಯುವ ಅವಕಾಶ.<br>5. 3–6 ವರ್ಷದೊಳಗಿನ ಮಕ್ಕಳಿಗೆ ಆಟ, ಹಾಡು ಮತ್ತು ಚಟುವಟಿಕೆಗಳ ಮೂಲಕ ಅಕ್ಷರ ಜ್ಞಾನವನ್ನು ನೀಡುವುದು. | 1. 3–6 ವರ್ಷದೊಳಗಿನ ಮಕ್ಕಳನ್ನು ಕಡ್ಡಾಯವಾಗಿ ಅಂಗನವಾಡಿ ಕೇಂದ್ರಗಳಿಗೆ ದಾಖಲಿಸಲು ಜಾಥಾ ಮತ್ತು ಮನೆ ಮನೆ ಭೇಟಿ.<br>2. ಅಂಗನವಾಡಿ ಕೇಂದ್ರಗಳಿಗೆ ದಾಖಲಾಗುವುದರಿಂದ ಮಕ್ಕಳಿಗೆ ದೊರೆಯುವ ಪೌಷ್ಟಿಕ ಆಹಾರ, ಮತ್ತು ಇತರೆ ಸೌಲಭ್ಯಗಳ ಬಗ್ಗೆ ಜನವಸತಿ ಸಭೆ, ವಾರ್ಡ ಸಭೆ, ಮಹಿಳಾ ಗ್ರಾಮ ಸಭೆ, ಮತ್ತು ಇತರೆ ಗ್ರಾಮಸಭೆ ಹಾಗೂ ಸ್ವಸಹಾಯ ಸಂಘದ ಸಭೆಗಳಲ್ಲಿ ಮಾಹಿತಿ ನೀಡುವುದು.<br>3. ಮಕ್ಕಳಿಗೆ ಸಿಗುವ ಆರೋಗ್ಯ ಸೌಲಭ್ಯಗಳ ಮಾಹಿತಿಯನ್ನು ನೀಡುವುದು. | 1. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ.<br>2. ಗ್ರಾಮ ಪಂಚಾಯಿತಿ | 1. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ.<br>2. ಗ್ರಾಮ ಪಂಚಾಯಿತಿ |

| ...ಸಂಖ್ಯೆ | ಗುರುತಿಸಿರುವ ಸಮಸ್ಯೆ / ಅಂಶ | ವಿವರಣೆ | ಪ್ರಾಮುಖ್ಯತೆ | ಅನುಷ್ಠಾನಿಸಬೇಕಾದ ಚಟುವಟಿಕೆಗಳು | ಜವಾಬ್ದಾರಿಯುತ ಇಲಾಖೆಗಳು / ಪಂ.ರಾಜ್ ಸಂಸ್ಥೆಗಳು/ ಸಮುದಾಯ | ಇಲಾಖಾವಾರು ಯೋಜನೆಗಳು / ಅನುದಾನದ ಮೂಲಗಳು |
|---|---|---|---|---|---|---|
| ). | ಮಕ್ಕಳ ಕಣ್ಮರೆ | 18 ವರ್ಷದೊಳಗಿನ ಮಗುವು ಅಪಹರಣ ಅಥವಾ ಸ್ವ ಇಚ್ಛೆಯಿಂದ ಗ್ರಾಮದಿಂದ ಕಾಣೆಯಾಗುವುದು | 1. ಮಕ್ಕಳನ್ನು ಸಿಹಿ ತಿನಿಸುಗಳು ಮತ್ತು ಸಣ್ಣ ಪುಟ್ಟ ಆಮಿಷಗಳನ್ನು ತೋರಿಸಿ ಅಪಹರಿಸಿ ಭಿಕ್ಷಾಟನೆ, ವೇಶ್ಯಾವಾಟಿಕೆ, ಮನೆಗೆಲಸ ಮತ್ತು ಅಪಾಯಕಾರಿಯಾದ ಕೆಲಸಗಳಲ್ಲಿ ತೊಡಗಿಸುತ್ತಾರೆ.<br>2. ಪರಿಣಾಮ ಮಕ್ಕಳು, ಪೋಷಕರಿಂದ ಬೇರ್ಪಟ್ಟು ಶಿಕ್ಷಣದಿಂದ ವಂಚಿತರಾಗಿ ಶೋಷಣೆಗೆ ಒಳಗಾಗುತ್ತಾರೆ.<br>3. ಪೋಷಕರು ಮತ್ತು ಸಮಾಜ ಮಕ್ಕಳ ಕಳ್ಳಸಾಗಾಣಿಕೆಯ ದುಷ್ಪರಿಣಾಮಕ್ಕೆ ಒಳಗಾಗುತ್ತಾರೆ. | 1. ಶಾಲೆಗಳಲ್ಲಿ ಮಕ್ಕಳಿಗೆ ಮಕ್ಕಳ ಅಪಹರಣದ ಬಗ್ಗೆ ತಜ್ಞ ವ್ಯಕ್ತಿಗಳಿಂದ ಅರಿವು ಮೂಡಿಸುವುದು.<br>2. ಮಗುವು ಕಾಣೆಯಾದ ತಕ್ಷಣ ಪೋಲೀಸ್ ಇಲಾಖೆಗೆ ದೂರು ಸಲ್ಲಿಸುವಂತೆ ಪೋಷಕರಿಗೆ ಪೋಷಕರ ಸಭೆ ಹಾಗೂ ಇತರ ಸಭೆಗಳಲ್ಲಿ ಮಾಹಿತಿ ನೀಡುವುದು.<br>3. ಮಕ್ಕಳ ಸಹಾಯವಾಣಿ ಸಂಖ್ಯೆಗಳ ಬಗ್ಗೆ ಮಕ್ಕಳಿಗೆ ತಿಳಿಸುವುದು.<br>4. ಅನುಮಾನಾಸ್ಪದ ವ್ಯಕ್ತಿಗಳು ಗ್ರಾಮದಲ್ಲಿ ಕಂಡು ಬಂದರೆ ತಕ್ಷಣ ಪೋಲೀಸ್ ಇಲಾಖೆಗೆ ಮಾಹಿತಿ ನೀಡುವಂತೆ ಸಾರ್ವಜನಿಕರಲ್ಲಿ ಅರಿವು ಮೂಡಿಸುವುದು.<br>5. ಮಹಿಳಾ ಮತ್ತು ಮಕ್ಕಳ ಕಾವಲು ಸಮಿತಿಯು ಸಕ್ರಿಯವಾಗಿ ಕಾರ್ಯಪ್ರವೃತ್ತಗೊಳಿಸುವುದು. ಮತ್ತು ಗ್ರಾಮ ಪಂಚಾಯತಿಯಲ್ಲಿರುವ ಮಕ್ಕಳ ಅಂಕಿ ಅಂಶಗಳು ಮತ್ತು ಚಲನ ವಲನದ ಬಗ್ಗೆ ಮೇಲ್ವಿಚಾರಣೆ ಮಾಡುವುದು.<br>6. ದುಡಿಮೆಯ ಉದ್ದೇಶದಿಂದ ವಲಸೆ ಹೋಗುವ ಕುಟುಂಬಗಳ ಮಕ್ಕಳ ಮೇಲೆ ನಿಗಾ ಇಡುವುದು. | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಆರಕ್ಷಕ ಇಲಾಖೆ, ಶಿಕ್ಷಣ ಇಲಾಖೆ, ಕಾರ್ಮಿಕ ಇಲಾಖೆ, ಭಿಕ್ಷಾಟನಾ ನಿರ್ಮೂಲನಾ ಮಂಡಳಿ, ಗ್ರಾಮ ಪಂಚಾಯಿತಿ | ಕೇಂದ್ರ ಮತ್ತು ರಾಜ್ಯ ಪುರಸ್ಕೃತ ಯೋಜನೆಗಳು, ಪಂಚಾಯತ್ ರಾಜ್ ಸಂಸ್ಥೆಗಳ ಅನುದಾನ. |

| ...ಮ ...ಖ್ಯೆ | ಗುರುತಿಸಿರುವ ಸಮಸ್ಯೆ / ಅಂಶ | ವಿವರಣೆ | ಪ್ರಾಮುಖ್ಯತೆ | ಅನುಷ್ಠಾನಿಸಬೇಕಾದ ಚಟುವಟಿಕೆಗಳು | ಜವಾಬ್ದಾರಿಯುತ ಇಲಾಖೆಗಳು / ಪಂ.ರಾಜ್ ಸಂಸ್ಥೆಗಳು/ ಸಮುದಾಯ | ಇಲಾಖಾವಾರು ಯೋಜನೆಗಳು / ಅನುದಾನದ ಮೂಲಗಳು |
|---|---|---|---|---|---|---|
| 1. | ಮಕ್ಕಳ ಮೇಲಾಗುವ ಲೈಂಗಿಕ ದೌರ್ಜನ್ಯ | ಕುಟುಂಬದ ಒಳಗೆ ಮತ್ತು ಹೊರಗೆ 18 ವರ್ಷದೊಳಗಿನ ಮಕ್ಕಳ ಮೇಲಾಗುವ ಲೈಂಗಿಕ ಕಿರುಕುಳ ಮತ್ತು ಬಳಕೆಯನ್ನು ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ಎನ್ನುವರು. | 1. ಮಕ್ಕಳಿಗೆ ಆಸೆ ತೋರಿಸಿ, ಹೆದರಿಸಿ ಬೆದರಿಸಿ ಮಕ್ಕಳೊಂದಿಗೆ ಲೈಂಗಿಕ ಸಂಪರ್ಕ ಬೆಳೆಸುವುದು ಶಿಕ್ಷಾರ್ಹ ಅಪರಾಧ.<br>2. ಬಹುತೇಕ ಸಂದರ್ಭಗಳಲ್ಲಿ ಮಗುವಿನ ಒಪ್ಪಿಗೆ ಇದ್ದರು 18 ವರ್ಷದೊಳಗಿನ ಮಗುವಿನೊಂದಿಗೆ ಲೈಂಗಿಕ ಕ್ರಿಯೆ ಮಾಡುವುದು ಅಪರಾಧವಾಗಿದೆ. ಕಾರಣ ಮಗುವಿಗೆ ಲೈಂಗಿಕತೆಯಿಂದುಂಟಾಗುವ ಪರಿಣಾಮಗಳ ಬಗ್ಗೆ ಅರಿವಿರುವುದಿಲ್ಲ ಎಂದು ಕಾನೂನು ಯೋಚಿಸಿದೆ.<br>3. ಬಹುತೇಕ ಸಂದರ್ಭಗಳಲ್ಲಿ ಮಗುವಿನ ಹತ್ತಿರದ ಸಂಬಂಧಿಗಳಿಂದ ಮಕ್ಕಳು ಲೈಂಗಿಕ ಕಿರುಕುಳಕ್ಕೆ ಒಳಗಾಗುತ್ತಾರೆ. | 1. ಶಾಲೆಗಳಲ್ಲಿ ಮಕ್ಕಳಿಗೆ ಲೈಂಗಿನ ಶಿಕ್ಷಣದ ಅರಿವು<br>2. ಪರಿಚಿತ ಮತ್ತು ಅಪರಿಚಿತರ ಒಳ್ಳೆಯ ಮತ್ತು ಕೆಟ್ಟ ಸ್ಪರ್ಶಗಳ ಬಗ್ಗೆ ತಪ್ಪಿಂದ ಮಾಹಿತಿ<br>3. ಪೋಕ್ಸೋ ಕಾಯಿದೆಯಡಿ ಅಪರಾಧಗಳು ಮತ್ತು ಶಿಕ್ಷೆಗಳ ಬಗ್ಗೆ ಮಕ್ಕಳಿಗೆ ಮಾಹಿತಿ ನೀಡುವುದು.<br>4. ಮಕ್ಕಳ ಗ್ರಾಮ ಸಭೆಗಳಲ್ಲಿ ಮತ್ತು ಇತರೆ ಗ್ರಾಮಸಭೆಗಳಲ್ಲಿ ಪೋಕ್ಸೋ ಕಾಯಿದೆ ಕುರಿತು ಅರಿವು<br>5. ಧನಿಪೆಟ್ಟಿಗೆಗಳನ್ನು ಸಾರ್ವಜನಿಕ ಸ್ಥಳಗಳಲ್ಲಿ ಇಡುವ ಮೂಲಕ ಮಕ್ಕಳ ಬಗ್ಗೆ ಕಾಳಜಿ ಇರುವ ವ್ಯಕ್ತಿಗಳಿಂದ ಕೋರಿಕೆ ಪತ್ರದ ಮೂಲಕ ಸಮಸ್ಯೆಗಳನ್ನು ಸ್ವೀಕರಿಸಿ ಪರಿಹರಿಸಲು ಕ್ರಮವಹಿಸುವುದು.<br>6. ಪೋಕ್ಸೋ ಕಾಯಿದೆ ಬಗ್ಗೆ ಗೋಡೆ ಬರಹ ಮತ್ತು ಭಿತ್ತಿ ಪತ್ರಗಳ ಮೂಲಕ ಸಾರ್ವಜನಿಕರಲ್ಲಿ ಅರಿವು ಮೂಡಿಸುವುದು.<br>7. ಪೋಷಕರಿಲ್ಲದ ಮಕ್ಕಳನ್ನು ಪುನರ್ವಸತಿ ಕೇಂದ್ರಗಳಾದ ಬಾಲಮಂದಿರಗಳಿಗೆ ಕಳುಹಿಸಿ ಪುನರ್ವಸತಿ ಕಲ್ಪಿಸುವುದು. | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಆರೋಗ್ಯ ಇಲಾಖೆ, ಆರಕ್ಷಕ ಇಲಾಖೆ, ಶಿಕ್ಷಣ ಇಲಾಖೆ, ಗ್ರಾಮ ಪಂಚಾಯಿತಿ, ಕಾನೂನು ಇಲಾಖೆ. | ಕೇಂದ್ರ ಮತ್ತು ರಾಜ್ಯ ಪುರಸ್ಕೃತ ಯೋಜನೆಗಳು, ಪಂಚಾಯತ್ ರಾಜ್ ಸಂಸ್ಥೆಗಳ ಅನುದಾನ. |

| ಗುರುತಿಸಿರುವ ಸಮಸ್ಯೆ / ಅಂಶ | ವಿವರಣೆ | ಪ್ರಾಮುಖ್ಯತೆ | ಅನುಷ್ಠಾನಿಸಬೇಕಾದ ಚಟುವಟಿಕೆಗಳು | ಜವಾಬ್ದಾರಿಯುತ ಇಲಾಖೆಗಳು / ಪಂ.ರಾಜ್ ಸಂಸ್ಥೆಗಳು/ ಸಮುದಾಯ | ಇಲಾಖಾವಾರು ಯೋಜನೆಗಳು / ಅನುದಾನದ ಮೂಲಗಳು |
|---|---|---|---|---|---|
| ಮಾದಕ ವ್ಯಸನ | 18 ವರ್ಷದೊಳಗಿನ ಮಕ್ಕಳು ಸಿಗರೇಟು, ಬೀಡಿ, ಮದ್ಯಪಾನ, ಗುಟ್ಕಾ, ಹೆರಾಯಿನ್, ಕೊಕೈನ್, ಮತ್ತು ಇತರೆ ಮತ್ತು ಭರಿಸುವ ಪದಾರ್ಥಗಳನ್ನು ನಿರಂತರವಾಗಿ ಬಳಸುವುದಕ್ಕೆ ಮಾದಕ ವಸ್ತುಗಳ ವ್ಯಸನಿಗಳು ಎಂದು ಕರೆಯುತ್ತಾರೆ. | 1. ವಿಘಟಿತ ಕುಟುಂಬಗಳು / ಒಂಟಿ ಪೋಷಕರಿರುವ ಕುಟುಂಬಗಳು / ಅಪರಾಧ ಹಿನ್ನಲೆಯಲ್ಲಿರುವ ಕುಟುಂಬಗಳ ಮಕ್ಕಳು ಹೆಚ್ಚಾಗಿ ಮಾದಕ ವ್ಯಸನಕ್ಕೆ ಒಳಗಾಗುತ್ತಾರೆ.<br>2. ಮಾದಕ ವ್ಯಸನ ಚಟವು ಮಕ್ಕಳನ್ನು ಅಪರಾಧ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುವಂತೆ ಮಾಡಿ ಬಾಲಾಪರಾಧಿಗಳನ್ನಾಗಿ ಮಾಡುತ್ತದೆ.<br>3. ವಿಘಟಿತ ಕುಟುಂಬದ ಮಕ್ಕಳು/ ಒಂಟಿ ಪೋಷಕರಿರುವ ಕುಟುಂಬಗಳು ಮತ್ತು ಅಪರಾಧಿ ಹಿನ್ನಲೆ ಇರುವ ಕುಟುಂಬಗಳ ಮಕ್ಕಳನ್ನು ಬಾಲಮಂದಿರ ಅಥವಾ ಇತರೆ ಪುನರ್ವಸತಿ ಕೇಂದ್ರಗಳಲ್ಲಿ ದಾಖಲಿಸುವುದರಿಂದ ಮಕ್ಕಳನ್ನು ರಕ್ಷಣೆ ಮಾಡಬಹುದು. | 1. ಪಂಚಾಯತ್ ರಾಜ್ ಎಲ್ಲಾ ಹಂತದ ಚುನಾಯಿತ ಪ್ರತಿನಿಧಿಗಳಿಗೆ, ಪೋಷಕರು, ಮಕ್ಕಳು, ಸಮುದಾಯ, ಶಾಲಾ ಶಿಕ್ಷಕರಿಗೆ ಪ್ರೌಢಾವಸ್ಥೆಯ ಮಕ್ಕಳಲ್ಲಿ ಉಂಟಾಗುವ ದೈಹಿಕ ಮತ್ತು ಮಾನಸಿಕ ಬದಲಾವಣೆಯ ಬಗ್ಗೆ ಜಾಗೃತಿ ಮೂಡಿಸುವುದು.<br>2. ವ್ಯಸನಗಳಿಂದ ಸಮಾಜದಲ್ಲಿ ಉಂಟಾಗುವ ದುಷ್ಪರಿಣಾಮಗಳ ಬಗ್ಗೆ ಅರಿವು ಮೂಡಿಸುವುದು.<br>3. ವ್ಯಸನಿ ಮಕ್ಕಳನ್ನು ಗುರುತಿಸಿ ಅವರನ್ನು ವ್ಯಸನ ಮುಕ್ತ ಕೇಂದ್ರಗಳಿಗೆ ದಾಖಲಿಸಿ ಗ್ರಾಮವನ್ನು ವ್ಯಸನ ಮುಕ್ತರನ್ನಾಗಿಸುವುದು. | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಆರೋಗ್ಯ ಇಲಾಖೆ, ಆರಕ್ಷಕ ಇಲಾಖೆ, ಶಿಕ್ಷಣ ಇಲಾಖೆ ಗ್ರಾಮ ಪಂಚಾಯಿತಿ ಕಾನೂನು ಇಲಾಖೆ. | ಕೇಂದ್ರ ಮತ್ತು ರಾಜ್ಯ ಪುರಸ್ಕೃತ ಯೋಜನೆಗಳು, ಪಂಚಾಯಿತ್ ರಾಜ್ ಸಂಸ್ಥೆಗಳ ಅನುದಾನ. |

| ಗುರುತಿಸಿರುವ ಸಮಸ್ಯೆ / ಅಂಶ | ವಿವರಣೆ | ಪ್ರಾಮುಖ್ಯತೆ | ಅನುಷ್ಠಾನಿಸಬೇಕಾದ ಚಟುವಟಿಕೆಗಳು | ಜವಾಬ್ದಾರಿಯುತ ಇಲಾಖೆಗಳು / ಪಂ.ರಾಜ್ ಸಂಸ್ಥೆಗಳು/ ಸಮುದಾಯ | ಇಲಾಖಾವಾರು ಯೋಜನೆಗಳು / ಅನುದಾನದ ಮೂಲಗಳು |
|---|---|---|---|---|---|
| ಮಾದಕ ವ್ಯಸನ | 18 ವರ್ಷದೊಳಗಿನ ಮಕ್ಕಳು ಸಿಗರೇಟು, ಬೀಡಿ, ಮದ್ಯಪಾನ, ಗುಟ್ಕಾ, ಹೆರಾಯಿನ್, ಕೊಕೈನ್, ಮತ್ತು ಇತರೆ ಮತ್ತು ಭರಿಸುವ ಪದಾರ್ಥಗಳನ್ನು ನಿರಂತರವಾಗಿ ಬಳಸುವುದಕ್ಕೆ ಮಾದಕ ವಸ್ತುಗಳ ವ್ಯಸನಿಗಳು ಎಂದು ಕರೆಯುತ್ತಾರೆ. | 1. ವಿಘಟಿತ ಕುಟುಂಬಗಳು / ಒಂಟಿ ಪೋಷಕರಿರುವ ಕುಟುಂಬಗಳು / ಅಪರಾಧ ಹಿನ್ನಲೆಯಲ್ಲಿರುವ ಕುಟುಂಬಗಳ ಮಕ್ಕಳು ಹೆಚ್ಚಾಗಿ ಮಾದಕ ವ್ಯಸನಕ್ಕೆ ಒಳಗಾಗುತ್ತಾರೆ.<br>2. ಮಾದಕ ವ್ಯಸನ ಚಟವು ಮಕ್ಕಳನ್ನು ಅಪರಾಧ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುವಂತೆ ಮಾಡಿ ಬಾಲಾಪರಾಧಿಗಳನ್ನಾಗಿ ಮಾಡುತ್ತದೆ.<br>3. ವಿಘಟಿತ ಕುಟುಂಬದ ಮಕ್ಕಳು/ ಒಂಟಿ ಪೋಷಕರಿರುವ ಕುಟುಂಬಗಳು ಮತ್ತು ಅಪರಾಧ ಹಿನ್ನಲೆ ಇರುವ ಕುಟುಂಬಗಳ ಮಕ್ಕಳನ್ನು ಬಾಲಮಂದಿರ ಅಥವಾ ಇತರೆ ಪುನರ್ವಸತಿ ಕೇಂದ್ರಗಳಲ್ಲಿ ದಾಖಲಿಸುವುದರಿಂದ ಮಕ್ಕಳನ್ನು ರಕ್ಷಣೆ ಮಾಡಬಹುದು. | 1. ಪಂಚಾಯಿತ್ ರಾಜ್ ಎಲ್ಲಾ ಹಂತದ ಚುನಾಯಿತ ಪ್ರತಿನಿಧಿಗಳಿಗೆ, ಪೋಷಕರು, ಮಕ್ಕಳು, ಸಮುದಾಯ, ಶಾಲಾ ಶಿಕ್ಷಕರಿಗೆ ಪ್ರೌಢಾವಸ್ಥೆಯ ಮಕ್ಕಳಲ್ಲಿ ಉಂಟಾಗುವ ದೈಹಿಕ ಮತ್ತು ಮಾನಸಿಕ ಬದಲಾವಣೆಯ ಬಗ್ಗೆ ಜಾಗೃತಿ ಮೂಡಿಸುವುದು.<br>2. ವ್ಯಸನಗಳಿಂದ ಸಮಾಜದಲ್ಲಿ ಉಂಟಾಗುವ ದುಷ್ಪರಿಣಾಮಗಳ ಬಗ್ಗೆ ಅರಿವು ಮೂಡಿಸುವುದು.<br>3. ವ್ಯಸನಿ ಮಕ್ಕಳನ್ನು ಗುರುತಿಸಿ ಅವರನ್ನು ವ್ಯಸನ ಮುಕ್ತ ಕೇಂದ್ರಗಳಿಗೆ ದಾಖಲಿಸಿ ಗ್ರಾಮವನ್ನು ವ್ಯಸನ ಮುಕ್ತರನ್ನಾಗಿಸುವುದು. | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಆರೋಗ್ಯ ಇಲಾಖೆ, ಆರಕ್ಷಕ ಇಲಾಖೆ, ಶಿಕ್ಷಣ ಇಲಾಖೆ ಗ್ರಾಮ ಪಂಚಾಯಿತಿ ಕಾನೂನು ಇಲಾಖೆ. | ಕೇಂದ್ರ ಮತ್ತು ರಾಜ್ಯ ಪುರಸ್ಕೃತ ಯೋಜನೆಗಳು, ಪಂಚಾಯಿತ್ ರಾಜ್ ಸಂಸ್ಥೆಗಳ ಅನುದಾನ. |

| ಮ ಖ್ಯೆ | ಗುರುತಿಸಿರುವ ಸಮಸ್ಯೆ / ಅಂಶ | ವಿವರಣೆ | ಪ್ರಾಮುಖ್ಯತೆ | ಅನುಷ್ಠಾನಿಸಬೇಕಾದ ಚಟುವಟಿಕೆಗಳು | ಜವಾಬ್ದಾರಿಯುತ ಇಲಾಖೆಗಳು / ಪಂ.ರಾಜ್ ಸಂಸ್ಥೆಗಳು/ ಸಮುದಾಯ | ಇಲಾಖಾವಾರು ಯೋಜನೆಗಳು / ಅನುದಾನದ ಮೂಲಗಳು |
|---|---|---|---|---|---|---|
| 13. | 0–6 ವರ್ಷದೊಳಗಿನ ವಿಶೇಷ ಚೇತನ ಮಕ್ಕಳು | ದೈಹಿಕ ಮತ್ತು ಮಾನಸಿಕ ವೈಕಲ್ಯತೆಯಿಂದ ಕೂಡಿರುವ 0 ಯಿಂದ 6 ವರ್ಷದೊಳಗಿನ ಮಕ್ಕಳನ್ನು ವಿಶೇಷ ಚೇತನ ಮಕ್ಕಳು ಎಂದು ಕರೆಯುವರು. | 1. ವಿಶೇಷ ಚೇತನ ಮಕ್ಕಳು ಕುಟುಂಬಕ್ಕೆ ಮತ್ತು ಸಮಾಜಕ್ಕೆ ಕಳಂಕ ಎಂಬ ಮನೋಭಾವ ಒಂದು ತಪ್ಪು ಕಲ್ಪನೆ.<br>2. ಹತ್ತಿರದ ರಕ್ತ ಸಂಬಂಧಿಗಳಲ್ಲಿ ವಿವಾಹವಾಗುವುದರಿಂದ ವಿಶೇಷ ಚೇತನ ಮಕ್ಕಳು ಹುಟ್ಟುತ್ತಾರೆ<br>3. ರಕ್ತ ಸಂಬಂಧಿಗಳಲ್ಲಿ ವಿವಾಹವಾಗುವುದನ್ನು ಪ್ರೋತ್ಸಾಹಿಸದಿರುವುದು ಮತ್ತು ವಿಶೇಷ ಚೇತನ ಮಕ್ಕಳ ಬಗ್ಗೆ ಇರುವ ತಪ್ಪು ಕಲ್ಪನೆಯನ್ನು ಹೋಗಲಾಡಿಸುವುದು. | 1. ವಿಶೇಷ ಚೇತನ ಮಕ್ಕಳ ಮಾಹಿತಿಯು ವಿಆರ್ ಡಬ್ಲ್ಯೂ (ಗ್ರಾಮೀಣ ಪುನರ್ವಸತಿ ಕಾರ್ಯಕರ್ತರು) ರವರಿಂದ ಪಡೆದು ಸರ್ಕಾರದ ಸೌಲಭ್ಯಗಳನ್ನು ಒದಗಿಸುವುದು.<br>2. ಮಕ್ಕಳ ಆರೋಗ್ಯ ನಿರಂತರ ತಪಾಸಣೆ ಮತ್ತು ಚಿಕಿತ್ಸೆಗೆ ಕ್ರಮ ವಹಿಸುವುದು<br>3. ಗರ್ಭಾವಸ್ಥೆಯಲ್ಲಿ ಶಿಶುವಿನ ಆರೋಗ್ಯ ಸಮಸ್ಯೆಗಳನ್ನು ಗುರುತಿಸಿ, ಪೋಷಕರಿಗೆ ತಿಳಿಸಿ, ಕಾನೂನಾತ್ಮಕವಾಗಿ ಗರ್ಭಪಾತ ಮಾಡಿಸಲು ಅವಕಾಶವಿರುವ ಬಗ್ಗೆ ಮಾಹಿತಿ ನೀಡುವುದು.<br>4. ಸಾರ್ವಜನಿಕರಲ್ಲಿ ಅರಿವು ಮೂಡಿಸುವುದು. | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಆರೋಗ್ಯ ಇಲಾಖೆ, ಆರಕ್ಷಕ ಇಲಾಖೆ, ಶಿಕ್ಷಣ ಇಲಾಖೆ, ಕಾನೂನು ಇಲಾಖೆ, ಗ್ರಾಮ ಪಂಚಾಯಿತಿ. | ಕೇಂದ್ರ ಮತ್ತು ರಾಜ್ಯ ಪ್ರಾಯೋಜಿತ ಕಾರ್ಯಕ್ರಮಗಳು, ಗ್ರಾಮ ಪಂಚಾಯಿತಿ ಅನುದಾನ |
| 14. | 6 ರಿಂದ 18 ವರ್ಷದೊಳಗಿನ ವಿಶೇಷ ಚೇತನ ಮಕ್ಕಳು | ದೈಹಿಕ ಮತ್ತು ಮಾನಸಿಕ ವೈಕಲ್ಯತೆಯಿಂದ ಕೂಡಿರುವ 6 ರಿಂದ 18 ವರ್ಷದೊಳಗಿನ ಮಕ್ಕಳನ್ನು ವಿಶೇಷ ಚೇತನ ಮಕ್ಕಳು ಎಂದು ಕರೆಯುವರು. | 1. ಹತ್ತಿರದ ರಕ್ತ ಸಂಬಂಧಿಗಳಲ್ಲಿ ವಿವಾಹವಾಗುವುದರಿಂದ ವಿಶೇಷ ಚೇತನ ಮಕ್ಕಳು ಹುಟ್ಟುತ್ತಾರೆ<br>2. 6 ರಿಂದ 18 ವರ್ಷವು ವ್ಯಕ್ತಿಯ ಜೀವನವನ್ನು ಬದಲಿಸುವ ಕಾಲಮಾನವಾಗಿದ್ದು ವಿಶೇಷ ಚೇನತ ಮಕ್ಕಳಿಗೆ ಸಮುದಾಯದ ಮತ್ತು ಪಂಚಾಯಿತಿಯ ಸಹಕಾರ ಅಗತ್ಯ<br>3. ಬಹುತೇಕ ಸಂದರ್ಭಗಳಲ್ಲಿ ಈ ವಯೋಮಾನದ ಮಕ್ಕಳು ಸರ್ಕಾರದ ಸೌಲಭ್ಯಗಳಿಂದ ವಂಚಿತರಾಗುತ್ತಿದ್ದಾರೆ. | 1. ವಿಶೇಷ ಚೇತನ ಮಕ್ಕಳ ಮಾಹಿತಿಯು ವಿಆರ್ ಡಬ್ಲ್ಯೂ (ಗ್ರಾಮೀಣ ಪುನರ್ವಸತಿ ಕಾರ್ಯಕರ್ತರು) ರವರಿಂದ ಪಡೆದು ಸರ್ಕಾರದ ಸೌಲಭ್ಯಗಳನ್ನು ಒದಗಿಸುವುದು.<br>2. ಗ್ರಾಮ ಪಂಚಾಯಿತಿಯ ಆಯ-ವ್ಯಯದಲ್ಲಿ ಶೇ.5 ರಷ್ಟು ಅನುದಾನವನ್ನು ಮೀಸಲಿರಿಸಿ ಅಗತ್ಯ ಸೇವೆ/ ಸೌಕರ್ಯ ಒದಗಿಸುವುದು<br>3. ಶಾಲೆಗಳಿಗೆ ತೆರಳಲು ಸಾಧ್ಯವಿಲ್ಲದ ಮಕ್ಕಳಿಗಾಗಿ ವಿಶೇಷ ಶಿಕ್ಷಕರ ಸೌಲಭ್ಯ ಕಲ್ಪಿಸುವುದು<br>4. ಶಿಕ್ಷಣ ಮತ್ತು ಸರ್ಕಾರಿ ಉದ್ಯೋಗದಲ್ಲಿ ವಿಶೇಷ ಚೇತನರಿಗೆ ಮೀಸಲಾತಿ ನೀಡಿದ್ದು ಈ ಕುರಿತು ಮಾಹಿತಿ ಒದಗಿಸುವುದು<br>5. ಸಾರ್ವಜನಿಕರಲ್ಲಿ ಅರಿವು ಮೂಡಿಸುವುದು. | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಆರೋಗ್ಯ ಇಲಾಖೆ, ಆರಕ್ಷಕ ಇಲಾಖೆ, ಶಿಕ್ಷಣ ಇಲಾಖೆ, ಕಾನೂನು ಇಲಾಖೆ, ಗ್ರಾಮ ಪಂಚಾಯಿತಿ. | ಕೇಂದ್ರ ಮತ್ತು ರಾಜ್ಯ ಪ್ರಾಯೋಜಿತ ಕಾರ್ಯಕ್ರಮಗಳು, ಗ್ರಾಮ ಪಂಚಾಯಿತಿ ಅನುದಾನ |

| ಕ್ರಮ ಸಂಖ್ಯೆ | ಗುರುತಿಸಿರುವ ಸಮಸ್ಯೆ / ಅಂಶ | ವಿವರಣೆ | ಪ್ರಾಮುಖ್ಯತೆ | ಅನುಷ್ಠಾನಿಸಬೇಕಾದ ಚಟುವಟಿಕೆಗಳು | ಜವಾಬ್ದಾರಿಯುತ ಇಲಾಖೆಗಳು / ಪಂ.ರಾಜ್ ಸಂಸ್ಥೆಗಳು/ ಸಮುದಾಯ | ಇಲಾಖಾವಾರು ಯೋಜನೆಗಳು / ಅನುದಾನದ ಮೂಲಗಳು |
|---|---|---|---|---|---|---|
| 5. | ಬಾಲ್ಯವಿವಾಹ | 18 ವರ್ಷದೊಳಗಿನ ಹೆಣ್ಣುಮಗು ಹಾಗೂ 21 ವರ್ಷದೊಳಗಿನ ಗಂಡು ಮಗು ಮೇಲೆ ತಿಳಿಸಿದ ವಯಸ್ಸನ್ನು ಪೂರ್ಣಗೊಳಿಸದೆ ವಿವಾಹವಾಗುವುದನ್ನು ಬಾಲ್ಯವಿವಾಹ ಎನ್ನುತ್ತೇವೆ. | 1. ಬಾಲ್ಯ ವಿವಾಹಕ್ಕೆ ಒಳಗಾದ ಮಗು ದೈಹಿಕವಾಗಿ ಮತ್ತು ಮಾನಸಿಕವಾಗಿ ಶೋಷಣೆಗೆ ಒಳಗಾಗುತ್ತದೆ. ಇದರ ಪರಿಣಾಮ ಮಗುವಿನ ಬೆಳವಣಿಗೆ ಮೇಲಾಗುತ್ತದೆ.<br>2. ಹೆಣ್ಣು ಮಗುವಿಗೆ ವಾತಾವರಣ ಬದಲಾವಣೆ ಮತ್ತು ಹೊಸ ಜವಾಬ್ದಾರಿಗಳು ಮಗುವಿನಲ್ಲಿ ಒತ್ತಡ ಸೃಷ್ಟಿಸಿ ಮಾನಸಿಕ ಆರೋಗ್ಯದ ಮೇಲೆ ಪರಿಣಾಮ ಬೀರುತ್ತದೆ.<br>3. 18 ವರ್ಷದೊಳಗಿನ ಹೆಣ್ಣು ಮಗುವು ದೈಹಿಕವಾಗಿ ಪೂರ್ಣವಾಗಿ ಬೆಳವಣಿಗೆ ಹೊಂದಿಲ್ಲದೇ ಇರುವುದರಿಂದ ಮಗುವಿನ ಜೊತೆ ಲೈಂಗಿಕ ಸಂಪರ್ಕ ಮತ್ತು ಗರ್ಭಧಾರಣೆ ಅಪಾಯಕಾರಿ.<br>4. 21 ವರ್ಷದೊಳಗಿನ ಗಂಡು ಮಗುವು ತಾನು ನಿರ್ವಹಿಸಬೇಕಾದ ಕರ್ತವ್ಯ ಮತ್ತು ಹೊಣೆಗಾರಿಕೆಗಳನ್ನು ನಿರ್ವಹಿಸಲು ಸಮರ್ಥರಾಗಿರುವುದಿಲ್ಲ.<br>4. ಬಾಲ್ಯದಲ್ಲಿಯೇ ಗರ್ಭಧರಿಸಿದ್ದಲ್ಲಿ ತಾಯಿ ಮತ್ತು ಮಗುವಿನ ಜೀವಕ್ಕೆ ಅಪಾರ<br>5. ಮಗುವು ಕಡ್ಡಾಯ ಪ್ರಾಥಮಿಕ ಶಿಕ್ಷಣದಿಂದ ವಂಚಿತರಾಗುತ್ತಾರೆ. ಮತ್ತು ಶಿಕ್ಷಣವನ್ನು ಮುಂದುವರೆಸಲು ಸಾಧ್ಯವಾಗದೇ ಅವಕಾಶಗಳಿಂದ ವಂಚಿತರಾಗುತ್ತಾರೆ. | 1. 18 ಮತ್ತು 21 ವರ್ಷದೊಳಗಿನ ಎಲ್ಲಾ ಹೆಣ್ಣು ಮತ್ತು ಗಂಡು ಮಕ್ಕಳು ಶಾಲೆ/ ಕಾಲೇಜುಗಳಲ್ಲಿಯೇ ಇರುವಂತೆ ಖಾತ್ರಿ ಪಡಿಸುವುದು.<br>2. ಶಾಲೆಯಿಂದ ಹೊರಗುಳಿದ ಮಕ್ಕಳ ಚಲನ ವಲನವನ್ನು ಗಮನಿಸುವುದು.<br>3. ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅನುತ್ತೀರ್ಣರಾದ ಹೆಣ್ಣು ಮತ್ತು ಗಂಡು ಮಕ್ಕಳ ಮೇಲ್ವಿಚಾರಣೆ ಹಾಗೂ ಶಿಕ್ಷಣವನ್ನು ಮುಂದುವರೆಸಲು ಪ್ರೋತ್ಸಾಹಿಸುವುದು.<br>4. ಮಕ್ಕಳ ಸಹಾಯವಾಣಿ ಸಂಖ್ಯೆಗಳನ್ನು ಸಾರ್ವಜನಿಕ ಸ್ಥಳಗಳಲ್ಲಿ ಬರೆಸುವುದು.<br>5. ಬಾಲ್ಯವಿವಾಹದಲ್ಲಿ ಭಾಗವಹಿಸಿದವರಿಗೆ ಇರುವ ಕಾನೂನಾತ್ಮಕ ಶಿಕ್ಷೆಗಳ ಬಗ್ಗೆ ಅರಿವು ಮೂಡಿಸುವುದು.<br>6. ಬಾಲ್ಯವಿವಾಹ ಶಿಕ್ಷಾರ್ಹವೆಂಬ ಸಾರ್ವಜನಿಕ ಜಾಗೃತಿ ಕಾರ್ಯಕ್ರಮಗಳು<br>7. ಶಾಲೆಗಳಲ್ಲಿ ಮಕ್ಕಳಿಗೆ ಬಾಲ್ಯ ವಿವಾಹದ ದುಷ್ಪರಿಣಾಮಗಳ ಕುರಿತು ನುರಿತ ತಜ್ಞ ವ್ಯಕ್ತಿಗಳಿಂದ ಮಾಹಿತಿ ನೀಡುವುದು.<br>8. ಮಕ್ಕಳಿಗೆ ಲೈಂಗಿಕ ಶಿಕ್ಷಣ ಮತ್ತು ಸುರಕ್ಷಿತ ಮತ್ತು ಅಸುರಕ್ಷಿತ ಸ್ಪರ್ಶದ ಬಗ್ಗೆ ತಿಳುವಳಿಕೆ ನೀಡುವುದು. | 1. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ,<br>2. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,<br>3. ಪ್ರಾಥಮಿಕ, ಪ್ರೌಢ ಮತ್ತು ಕಾಲೇಜು ಶಿಕ್ಷಣ ಇಲಾಖೆ,<br>4. ಗ್ರಾಮ ಪಂಚಾಯಿತಿ / ತಾಲ್ಲೂಕು ಪಂಚಾಯತ್/ ಜಿಲ್ಲಾ ಪಂಚಾಯತ್,<br>5. ಪೋಲೀಸ್ ಇಲಾಖೆ,<br>6. ನ್ಯಾಯಾಂಗ ಇಲಾಖೆ. | ಕೇಂದ್ರ ಮತ್ತು ರಾಜ್ಯ ಪ್ರಾಯೋಜಿತ ಕಾರ್ಯಕ್ರಮಗಳು, ಗ್ರಾಮ ಪಂಚಾಯಿತಿ ಅನುದಾನ |

| ಗುರುತಿಸಿರುವ ಸಮಸ್ಯೆ / ಅಂಶ | ವಿವರಣೆ | ಪ್ರಾಮುಖ್ಯತೆ | ಅನುಷ್ಠಾನಿಸಬೇಕಾದ ಚಟುವಟಿಕೆಗಳು | ಜವಾಬ್ದಾರಿಯುತ ಇಲಾಖೆಗಳು / ಪಂ.ರಾಜ್ ಸಂಸ್ಥೆಗಳು/ ಸಮುದಾಯ | ಇಲಾಖಾವಾರು ಯೋಜನೆಗಳು / ಅನುದಾನದ ಮೂಲಗಳು |
|---|---|---|---|---|---|
| ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಕ್ಕಳು (ಬಾಲಾಪರಾಧಿಗಳು) | ಕಾನೂನಿನ ವಿರುದ್ಧದ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ಶಿಕ್ಷೆಗೆ ಗುರಿಯಾಗಿರುವ 18 ವರ್ಷದೊಳಗಿನ ಮಕ್ಕಳನ್ನು ಬಾಲಾಪರಾಧಿಗಳು ಎನ್ನುತ್ತೇವೆ. | 1. ಕೌಟುಂಬಿಕ / ಸಾಮಾಜಿಕ / ಆರ್ಥಿಕ ಕಾರಣಗಳಿಂದ ಮಕ್ಕಳು ಕಾನೂನಿಗೆ ವಿರುದ್ಧವಾದ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದರಿಂದ ಮಕ್ಕಳು ಸಮಾಜಕ್ಕೆ ಕಂಟಕವಾಗಿ ಪರಿಣಮಿಸುತ್ತಾರೆ.<br>2. ಮಕ್ಕಳಲ್ಲಿ ಅಪರಾಧ ಮನೋಭಾವಗಳು ಕಂಡುಬಂದ ತಕ್ಷಣ ಸಮಾಲೋಚನೆ ಮತ್ತು ಪುನರ್ವಸತಿ ಕಲ್ಪಿಸುವ ಅಗತ್ಯವಿದೆ.<br>3. ಮಕ್ಕಳನ್ನು ಸಮಾಜ ಘಾತುಕ ಶಕ್ತಿ/ಚಟುವಟಿಕೆಗಳಿಂದ ರಕ್ಷಿಸುವ ಮೂಲಕ ಆರೋಗ್ಯ ಕರ ಸಮಾಜ ನಿರ್ಮಾಣ ಸಾಧ್ಯ. | 1. ಮಕ್ಕಳ ಹಕ್ಕುಗಳ ಬಗ್ಗೆ ಮಕ್ಕಳು, ಪೋಷಕರು ಮತ್ತು ಸಮುದಾಯಕ್ಕೆ ಅರಿವು ಮೂಡಿಸುವುದು<br>2. ಬಾಲಾಪರಾಧ ಕಾನೂನುಗಳ ಬಗ್ಗೆ ಮಕ್ಕಳು, ಪೋಷಕರು ಮತ್ತು ಸಮುದಾಯಕ್ಕೆ ವಾರ್ತಾ ಇಲಾಖೆಯ ಮಾಹಿತಿ ವಾಹಿನಿ ಮೂಲಕ ಮಾಹಿತಿ ನೀಡುವುದು<br>3. ಶಾಲೆಗಳಲ್ಲಿ ನೈತಿಕತೆ ಮತ್ತು ರಾಷ್ಟ್ರಾಭಿಮಾನ ಹೆಚ್ಚಿಸಲು ಸಾಧಕರ ಬಗ್ಗೆ ತಿಳಿಸುವುದು.<br>4. ಸಮಾಜ ವಿರೋಧಿ ಚಟುಟಿಕೆಗಳಲ್ಲಿ ತೊಡಗಿಸಿಕೊಂಡಿರುವ ಮಕ್ಕಳನ್ನು ಗುರುತಿಸಿ ಪುನರ್ವಸತಿ ಕಲ್ಪಿಸುವುದು. | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಆರೋಗ್ಯ ಇಲಾಖೆ, ಆರಕ್ಷಕ ಇಲಾಖೆ, ಶಿಕ್ಷಣ ಇಲಾಖೆ, ಕಾನೂನು ಇಲಾಖೆ, ಗ್ರಾಮ ಪಂಚಾಯಿತಿ | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಗ್ರಾಮ ಪಂಚಾಯಿತಿ, ಪಂಚಾಯತ್ ರಾಜ್ ಸಂಸ್ಥೆಗಳು |
| ಬಾಲ ಭಿಕ್ಷುಕರು | ಜೀವನೋಪಾಯಕ್ಕಾಗಿ ಭಿಕ್ಷಾಟನೆಯಲ್ಲಿ ತೊಡಗಿರುವ 18 ವರ್ಷದೊಳಗಿನ ಮಕ್ಕಳನ್ನು ಬಾಲ ಭಿಕ್ಷುಕರು ಎನ್ನುವರು | 1. ವ್ಯಸನಿ ಕುಟುಂಬ, ಕಡುಬಡವರು, ಮುಖ್ಯಸ್ಥರಿಲ್ಲದ ಕುಟುಂಬದ ಮಕ್ಕಳು ತಮ್ಮ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ಭಿಕ್ಷಾಟನೆಯನ್ನು ಸುಲಭದಾರಿ ಆಗಿಸಿಕೊಂಡಿದ್ದಾರೆ.<br>2. ಆರೋಗ್ಯವಂತ ಸಮಾಜ ನಿರ್ಮಾಣ ಮಾಡಿ ಮಕ್ಕಳ ಹಕ್ಕುಗಳನ್ನು ಸಂರಕ್ಷಿಸುವ ಅಗತ್ಯವಿದೆ. | 1. ಕಡುಬಡವರು, ಮುಖ್ಯಸ್ಥರಿಲ್ಲದ ಕುಟುಂಬಗಳಿಗೆ ಜೀವನೋಪಾಯ ಚಟುವಟಿಕೆಗಳನ್ನು ಪಂಚಾಯಿತಿಯ ಮೂಲಕ ಒದಗಿಸುವುದು.<br>2. ಬಾಲ ಭಿಕ್ಷಾಟಣೆಯನ್ನು ನಿರ್ಮೂಲನೆ ಮಾಡಲು ಬಾಲ ಬಿಕ್ಷುಕರನ್ನು ಪುನರ್ವಸತಿ ಕೇಂದ್ರಗಳಿಗೆ ದಾಖಲಿಸಿ ಶಿಕ್ಷಿತರನ್ನಾಗಿಸುವುದು.<br>3. ಮಕ್ಕಳ ಸಹಾಯವಾಣಿ ಸಂಖ್ಯೆಯನ್ನು ಸಾರ್ವಜನಿಕ ಸ್ಥಳಗಳಲ್ಲಿ ಪ್ರಕಟಿಸುವುದು.<br>4. ಸಮುದಾಯ ಅರಿವು ಕಾರ್ಯಕ್ರಮಗಳು. | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಆರಕ್ಷಕ ಇಲಾಖೆ, ಶಿಕ್ಷಣ ಇಲಾಖೆ, ಕಾನೂನು ಇಲಾಖೆ, ಭಿಕ್ಷಾಟಣೆ ನಿರ್ಮೂಲನಾ ಮಂಡಳಿ, ಗ್ರಾಮ ಪಂಚಾಯಿತಿ. | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಭಿಕ್ಷಾಟಣೆ ನಿರ್ಮೂಲನಾ ಮಂಡಳಿ, ಗ್ರಾಮ ಪಂಚಾಯಿತಿ |

| ಗುರುತಿಸಿರುವ ಸಮಸ್ಯೆ / ಅಂಶ | ವಿವರಣೆ | ಪ್ರಾಮುಖ್ಯತೆ | ಅನುಷ್ಠಾನಿಸಬೇಕಾದ ಚಟುವಟಿಕೆಗಳು | ಜವಾಬ್ದಾರಿಯುತ ಇಲಾಖೆಗಳು / ಪಂ.ರಾಜ್ ಸಂಸ್ಥೆಗಳು/ ಸಮುದಾಯ | ಇಲಾಖಾವಾರು ಯೋಜನೆಗಳು / ಅನುದಾನದ ಮೂಲಗಳು |
|---|---|---|---|---|---|
| ಜನನ ಸಂದರ್ಭದಲ್ಲಿನ ಲಿಂಗಾನುಪಾತ | ಮಗುವು ಭೂಮಿಗೆ ಬಂದ ಸಂದರ್ಭದಲ್ಲಿ ಜನಿಸುವ ಒಟ್ಟು ಗಂಡು ಮಕ್ಕಳಿಗೆ ಜನಿಸುವ ಒಟ್ಟು ಹೆಣ್ಣು ಮಕ್ಕಳ ಸಂಖ್ಯೆ | 1. ಹೆಣ್ಣು ಭ್ರೂಣ ಹತ್ಯೆಯಿಂದಾಗಿ ಲಿಂಗಾನುಪಾತ ದಲ್ಲಿ ವ್ಯತ್ಯಾಸ ಉಂಟಾಗಿ ಮಹಿಳೆಯರ ಶೋಷಣೆ ಹೆಚ್ಚಾಗುತ್ತದೆ.<br>2. ಹೆಣ್ಣು ಮಕ್ಕಳ ಭ್ರೂಣಹತ್ಯೆ ತಡೆದು ಸಮ ಸಮಾಜ ನಿರ್ಮಾಣ ಮಾಡುವುದು. | 1. ಹೆಣ್ಣು ಮತ್ತು ಗಂಡು ಮಕ್ಕಳು ಸಮಾನರು ಎಂಬ ಅರಿವನ್ನು, ಸಾರ್ವಜನಿಕರಲ್ಲಿ ಮೂಡಿಸುವುದು.<br>2. ಹೆಣ್ಣು ಮಗುವು ಜನಿಸಿದ ಸಂದರ್ಭದಲ್ಲಿ ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ಪಂಚಾಯಿತಿಯು ಕೈಗೊಳ್ಳುವುದು ಮತ್ತು ಕುಟುಂಬದಲ್ಲಿ ಅರಿವು ಮೂಡಿಸುವುದು. | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಗ್ರಾಮ ಪಂಚಾಯಿತಿ. | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಅನುದಾನ. ಗ್ರಾಮ ಪಂಚಾಯಿತಿ. |
| ಮಕ್ಕಳ ಲಿಂಗಾನುಪಾತ | 0–6 ವರ್ಷದೊಳಗಿನ 1000 ಗಂಡು ಮಕ್ಕಳಿಗೆ ಇರುವ ಹೆಣ್ಣು ಮಕ್ಕಳ ಸಂಖ್ಯೆಯನ್ನು ಮಕ್ಕಳ ಲಿಂಗಾನುಪಾತ ಎಂದು ಕರೆಯುವರು | 1. 0–6 ವರ್ಷದೊಳಗಿನ ಹೆಣ್ಣು ಮಕ್ಕಳ ಸಂಖ್ಯೆ ಕಡಿಮೆಯಾದಲ್ಲಿ ಮುಂದಿನ ದಿನಗಳಲ್ಲಿ ಸಮಾಜದಲ್ಲಿ ಲೈಂಗಿಕ ದೌರ್ಜನ್ಯ, ಅಪಹರಣ ಮತ್ತು ಕೆಟ್ಟ ಆಚರಣೆಗಳು ಹೆಚ್ಚುವ ಸಂಭವವಿರುತ್ತದೆ.<br>2. ಭಾರತದ ಗ್ರಾಮೀಣ ಸಮಾಜವು ಈಗಲು ಪುರುಷ ಪ್ರಧಾನವಾಗಿದ್ದು, ಗಂಡು ಮಕ್ಕಳಿಂದ ಮಾತ್ರ ಮೋಕ್ಷ ಸಾಧ್ಯವೆಂಬ ತಪ್ಪು ಕಲ್ಪನೆ ಅಥವ ಆಚರಣೆ ಹೆಣ್ಣು ಭ್ರೂಣ ಹತ್ಯೆಗೆ ಕಾರಣವಾಗಿದೆ.<br>3. ಸಮ ಸಮಾಜ ನಿರ್ಮಿಸಲು ಹೆಣ್ಣು ಗಂಡು ಸಮಾನವೆಂಬ ಮತ್ತು ಹೆಣ್ಣು ಮಕ್ಕಳನ್ನು ಪಡೆಯುವ ಪ್ರಕ್ರಿಯೆಯಲ್ಲಿ ತಂದೆಯ ಪಾತ್ರ ಪ್ರಮುಖವಾಗಿದೆಯೆಂದು ತಿಳಿಸುವುದು. | 1. ಹೆಣ್ಣು ಮತ್ತು ಗಂಡು ಮಕ್ಕಳು ಸಮಾನರು ಎಂಬ ಅರಿವನ್ನು ಸಾರ್ವಜನಿಕರಲ್ಲಿ ಮೂಡಿಸುವುದು.<br>2. ಹೆಣ್ಣು ಭ್ರೂಣ ಪತ್ತೆ ಮತ್ತು ಹತ್ಯೆ ಶಿಕ್ಷಾರ್ಹ ಅಪರಾಧವಾಗಿದೆ ಎಂಬ ಕಾನೂನಿನ ಅರಿವು<br>3. 0–6 ವರ್ಷದೊಳಗಿನ ಹೆಣ್ಣು ಮಕ್ಕಳ ಆರೋಗ್ಯದ ಕಾಳಜಿ ಮಾಡದೆ ಮರಣಹೊಂದುವ ಮಕ್ಕಳ ಸಂಖ್ಯೆ ಹೆಚ್ಚಿರುವುದು ವರದಿಯಾಗಿದ್ದು, ಪಂಚಾಯಿತಿಯು ಮುಂಜಾಗ್ರತ ಕ್ರಮಗಳನ್ನು ಕೈಗೊಳ್ಳುವುದು.<br>4. ಸರ್ಕಾರವು ಹೆಣ್ಣು ಮಕ್ಕಳ ಸಂರಕ್ಷಣೆಗಾಗಿ ಕೈಗೊಂಡಿರುವ ಕಾರ್ಯಕ್ರಮಗಳು ಮತ್ತು ಯೋಜನೆಗಳ ಬಗ್ಗೆ ಪ್ರಚಾರ ಮಾಡುವುದು ಮತ್ತು ಸೌಲಭ್ಯಗಳು ಅರ್ಹರಿಗೆ ದೊರೆಯುವಂತೆ ಮಾಡುವುದು. | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಆರೋಗ್ಯ ಇಲಾಖೆ, ಆರಕ್ಷಕ ಇಲಾಖೆ, ಶಿಕ್ಷಣ ಇಲಾಖೆ, ಕಾನೂನು ಇಲಾಖೆ, ಗ್ರಾಮ ಪಂಚಾಯಿತಿ. | ಕೇಂದ್ರ ಮತ್ತು ರಾಜ್ಯ ಪ್ರಾಯೋಜಿತ ಕಾರ್ಯಕ್ರಮಗಳು, ಗ್ರಾಮ ಪಂಚಾಯಿತಿ ಅನುದಾನ |

| ಯ್ಯೆ | ಗುರುತಿಸಿರುವ ಸಮಸ್ಯೆ / ಅಂಶ | ವಿವರಣೆ | ಪ್ರಾಮುಖ್ಯತೆ | ಅನುಷ್ಠಾನಿಸಬೇಕಾದ ಚಟುವಟಿಕೆಗಳು | ಜವಾಬ್ದಾರಿಯುತ ಇಲಾಖೆಗಳು / ಪಂ.ರಾಜ್ ಸಂಸ್ಥೆಗಳು / ಸಮುದಾಯ | ಇಲಾಖಾವಾರು ಯೋಜನೆಗಳು / ಅನುದಾನದ ಮೂಲಗಳು |
|---|---|---|---|---|---|---|
| 0. | ಪರಿತ್ಯಕ್ತ ಮಕ್ಕಳು | ಪೋಷಕರಿಂದ ತ್ಯಜಿಸಲ್ಪಟ್ಟ ಮಕ್ಕಳು. ಉದಾ: ಸಾಮಾಜಿಕ, ಆರ್ಥಿಕ ಕಾರಣಗಳಿಂದಾಗಿ ನಿರ್ಜನ ಪ್ರದೇಶಗಳಲ್ಲಿ ನವಜಾತ ಶಿಶು / ಮಕ್ಕಳನ್ನು ಬಿಟ್ಟು ಹೋಗುವುದನ್ನು ಪರಿತ್ಯಕ್ತ ಮಕ್ಕಳು ಎನ್ನುತ್ತೇವೆ. | 1. ಶಿಶುವು ಹೆಣ್ಣು ಮಗುವಾಗಿದೆಯೆಂದು ಅಥವ ಮಗುವು ಅಂಗವೈಕಲ್ಯ ಮತ್ತು ಆರೋಗ್ಯ ಸಮಸ್ಯೆಗಳಿಂದ ಬಳಲುತ್ತಿರುವಂತಹ ಮಕ್ಕಳನ್ನು ಕುಟುಂಬವು ಆರ್ಥಿಕ ಕಾರಣಗಳಿಗಾಗಿ ತ್ಯಜಿಸುವುದು.<br>2. ಸಾಮಾಜಿಕ ಕಟ್ಟುಪಾಡುಗಳಿಗೆ ವಿರುದ್ಧವಾಗಿ ಅಕ್ರಮವಾಗಿ ಜನಿಸಿದ ಮಕ್ಕಳನ್ನು ಸಮಾಜವು ನಿಂದಿಸುವುದು ಎಂಬ ಭಯದಿಂದ ತ್ಯಜಿಸುವುದು.<br>3. ಜನಿಸಿದ ಪ್ರತೀ ಮಕ್ಕಳಿಗೆ ಬದುಕುವ ಹಕ್ಕಿದ್ದು, ಅದರಂತೆ ಪರಿತ್ಯಕ್ತ ಮಕ್ಕಳ ರಕ್ಷಣೆ, ಆರೋಗ್ಯ ಸೇವೆ ಮತ್ತು ಪುನರ್ವಸತಿ ಒದಗಿಸುವುದು ಸಮಾಜದ ಕರ್ತವ್ಯವಾಗಿದೆ. | 1. ಮಕ್ಕಳ ಸಹಾಯವಾಣಿ ಸಂಖ್ಯೆಯನ್ನು ಸಾರ್ವಜನಿಕ ಸ್ಥಳಗಳಲ್ಲಿ ಪ್ರಕಟಿಸುವುದು.<br>2. ಸಮುದಾಯ ಅರಿವು ಕಾರ್ಯಕ್ರಮಗಳು<br>3. ಪರಿತ್ಯಕ್ತ ಮಕ್ಕಳನ್ನು ಕಾನೂನಿನಂತೆ ಪುನರ್ವಸತಿ ಕೇಂದ್ರಗಳಿಗೆ ವರ್ಗಾಯಿಸುವುದು. | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಆರಕ್ಷರ ಇಲಾಖೆ, ಗ್ರಾಮ ಪಂಚಾಯಿತಿ, ಸಮುದಾಯ | ಕೇಂದ್ರ ಮತ್ತು ರಾಜ್ಯ ಪ್ರಾಯೋಜಿತ ಕಾರ್ಯಕ್ರಮಗಳು, ಗ್ರಾಮ ಪಂಚಾಯಿತಿ ಅನುದಾನ |
| 1. | ಬಾಲ ಕಾರ್ಮಿಕರು | ಆರ್ಥಿಕ ಉದ್ದೇಶಗಳಿಗಾಗಿ ದುಡಿಮೆಯಲ್ಲಿ ತೊಡಗುವ 14 ವರ್ಷದೊಳಗಿನ ಮಕ್ಕಳನ್ನು ಬಾಲಕಾರ್ಮಿಕರು ಎನ್ನುತ್ತೇವೆ. | 1. ಕುಟುಂಬದ ಬಡತನ ಅನಕ್ಷರತೆ, ಜಾತಿಪದ್ಧತಿಗಳು ಬಾಲ ಕಾರ್ಮಿಕತೆಗೆ ಕಾರಣವಾಗಿದೆ.<br>2. 6–14 ವರ್ಷದೊಳಗಿನ ಎಲ್ಲಾ ಮಕ್ಕಳಿಗು ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕಿದ್ದು, ಇವರನ್ನು ಕಡ್ಡಾಯವಾಗಿ ಶಾಲೆಗಳಿಗೆ ಕಳಿಸುವುದು ಪೋಷಕರ ಮೂಲಭೂತ ಕರ್ತವ್ಯವಾಗಿದೆ.<br>3. ಶಿಕ್ಷಣದೊಂದಿಗೆ ಮಕ್ಕಳಿಗೆ ಇತರ ಕೌಶಲ್ಯಗಳನ್ನು ನೀಡುವುದರಿಂದ ಬಡತನ ಮುಕ್ತ ಸಮಾಜವನ್ನು ನಿರ್ಮಾಣ ಮಾಡಬಹುದು. | 1. ಪಂಚಾಯಿತಿ ವತಿಯಿಂದ ಕುಟುಂಬದವರಿಗೆ ಉದ್ಯೋಗ ಚೀಟಿ ಒದಗಿಸುವುದು.<br>2. ಬಾಲ ಕಾರ್ಮಿಕ ನಿಷೇಧ ಕಾಯಿದೆ ಕುರಿತು ಜಾಗೃತಿ ಮೂಡಿಸುವುದು ಮತ್ತು ಕ್ರಮ ವಹಿಸುವುದು<br>3. ಶಾಲೆಗೆ ಗೈರು ಹಾಜರು, ಶಾಲೆಯಿಂದ ಹೊರಗುಳಿದ ಮತ್ತು ವಲಸೆ ಹೋದ ಮಕ್ಕಳುಗಳ ಮಾಹಿತಿಯನ್ನು ಒದಗಿಸುವುದು ಮತ್ತು ಶಾಲೆಗೆ ದಾಖಲಾಗುವಂತೆ ಕ್ರಮ ವಹಿಸುವುದು. | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಕಾರ್ಮಿಕ ಇಲಾಖೆ, ಶಿಕ್ಷಣ ಇಲಾಖೆ ಆರಕ್ಷರ ಇಲಾಖೆ, ಗ್ರಾಮ ಪಂಚಾಯಿತಿ, ಸಮುದಾಯ | ಕೇಂದ್ರ ಮತ್ತು ರಾಜ್ಯ ಪ್ರಾಯೋಜಿತ ಕಾರ್ಯಕ್ರಮಗಳು, ಗ್ರಾಮ ಪಂಚಾಯಿತಿ ಅನುದಾನ |

# ಗ್ರಾಮ ಪಂಚಾಯಿತಿ ಮಕ್ಕಳ ಅಭಿವೃದ್ಧಿ ಯೋಜನೆ

| ಕ್ರಮ ಸಂಖ್ಯೆ | ಗುರುತಿಸಿರುವ ಸಮಸ್ಯೆ / ಅಂಶ | ಮಾಹಿತಿಯ ಮೂಲ | ಸೂಚ್ಯಂಕ | ಸಂಖ್ಯಾಕಾರಕ (Numerators) (2021-22 ರಂತೆ ಸಂಖ್ಯೆಯನ್ನು ನಮೂದಿಸಿ) | ಭೇದಕ (Denominator) (2021-22 ರಂತೆ ಸಂಖ್ಯೆಯನ್ನು ನಮೂದಿಸಿ) | ಪ್ರಸ್ತುತ ಸ್ಥಿತಿ (ಸಂಖ್ಯೆಯಲ್ಲಿ) (2021-22ರಂತೆ) | ಸಾಧಿಸಬಹುದಾದ ಗುರಿ | ಸಾಧಿಸಬಹುದಾದ ಗುರಿ ನಿರ್ಧಾರಣೆಗೆ ಉದಾಹರಣೆ |
|---|---|---|---|---|---|---|---|---|
| 1. | ಸಮಗ್ರ ಶಿಶು ಅಭಿವೃದ್ಧಿ ಯೋಜನೆ | ಅಂಗನವಾಡಿ ಕಾರ್ಯಕರ್ತೆ, ಆಶಾ ಕಾರ್ಯಕರ್ತೆ, ಗ್ರಾಮ ಪಂಚಾಯಿತಿ | ಸಮಗ್ರ ಶಿಶು ಅಭಿವೃದ್ಧಿ ಯೋಜನೆಯಡಿ ಸೌಲಭ್ಯ ಪಡೆಯುತ್ತಿರುವವರ ಸಂಖ್ಯೆ | | | | | ಗ್ರಾಮದ ಅರ್ಹ ಎಲ್ಲಾ ಫಲಾನುಭಿಗಳನ್ನು ಯೋಜನೆಯಡಿ ತರುವುದು |
| 2. | 0-3 ವರ್ಷದೊಳಗಿನ ಮಕ್ಕಳಲ್ಲಿ ಸಮಗ್ರ ಶಿಶು ಅಭಿವೃದ್ಧಿ ಯೋಜನೆಯಡಿ ಸೌಲಭ್ಯ ಪಡೆಯುತ್ತಿರುವ ಫಲಾನುಭವಿಗಳ ಸಂಖ್ಯೆ | ಅಂಗನವಾಡಿ ಕಾರ್ಯಕರ್ತೆ, ಆಶಾ ಕಾರ್ಯಕರ್ತೆ, ಗ್ರಾಮ ಪಂಚಾಯಿತಿ | 0-3 ವರ್ಷದೊಳಗಿನ ಮಕ್ಕಳು | | | | | ಅಪೌಷ್ಟಿಕತೆ ಮುಕ್ತ ಮಕ್ಕಳು |
| 3. | 3-6 ವರ್ಷದೊಳಗಿನವರ ಸಮಗ್ರ ಶಿಶು ಅಭಿವೃದ್ಧಿ ಯೋಜನೆಯಡಿ ಸೌಲಭ್ಯ ಪಡೆಯುತ್ತಿರುವವರ ಸಂಖ್ಯೆ | ಅಂಗನವಾಡಿ ಕಾರ್ಯಕರ್ತೆ, ಆಶಾ ಕಾರ್ಯಕರ್ತೆ, ಗ್ರಾಮ ಪಂಚಾಯಿತಿ | 3-6 ವರ್ಷದೊಳಗಿನ ಮಕ್ಕಳು | | | | | ಅಪೌಷ್ಟಿಕತೆ ಮುಕ್ತ ಮಕ್ಕಳು |
| 4. | ಗರ್ಭಿಣಿಯರು ಮತ್ತು ಹಾಲುಣಿಸುವ ತಾಯಂದಿರಲ್ಲಿ-ಸಮಗ್ರ ಶಿಶು ಅಭಿವೃದ್ಧಿ ಯೋಜನೆಯಡಿ ಸೌಲಭ್ಯ ಪಡೆಯುತ್ತಿರುವವರ ಸಂಖ್ಯೆ | ಅಂಗನವಾಡಿ ಕಾರ್ಯಕರ್ತೆ, ಆಶಾ ಕಾರ್ಯಕರ್ತೆ, ಗ್ರಾಮ ಪಂಚಾಯಿತಿ | ಗರ್ಭಿಣಿಯರು ಮತ್ತು ಹಾಲುಣಿಸುವ ತಾಯಂದಿರು | | | | | ಸುರಕ್ಷಿತ ತಾಯ್ತನ |

| ಕ್ರಮ ಸಂಖ್ಯೆ | ಗುರುತಿಸಿರುವ ಸಮಸ್ಯೆ / ಅಂಶ | ಮಾಹಿತಿಯ ಮೂಲ | ಸೂಚ್ಯಂಕ | ಸಂಖ್ಯಾಕಾರಕ (Numerators) (2021–22 ರಂತೆ ಸಂಖ್ಯೆಯನ್ನು ನಮೂದಿಸಿ) | ಭೇದಕ (Denominator) (2021–22 ರಂತೆ ಸಂಖ್ಯೆಯನ್ನು ನಮೂದಿಸಿ) | ಪ್ರಸ್ತುತ ಸ್ಥಿತಿ (ಸಂಖ್ಯೆಯಲ್ಲಿ) (2021–22ರಂತೆ) | ಸಾಧಿಸಬಹುದಾದ ಗುರಿ | ಸಾಧಿಸಬಹುದಾದ ಗುರಿ ನಿರ್ಧರಣೆಗೆ ಉದಾಹರಣೆ |
|---|---|---|---|---|---|---|---|---|
| 5. | ಎತ್ತರಕ್ಕೆ ತಕ್ಕ ತೂಕವಿಲ್ಲದ (ವೇಸ್ಟೆಡ್) ಮಕ್ಕಳು | 1. ಅಂಗನವಾಡಿ ಕಾರ್ಯಕರ್ತೆ<br>2. ಆಶಾ ಕಾರ್ಯಕರ್ತೆ / ಆರೋಗ್ಯ ಸಹಾಯಕರು. | 5 ವರ್ಷದೊಳಗಿನ ಎತ್ತರಕ್ಕೆ ತಕ್ಕ ತೂಕವಿಲ್ಲದ ಮಕ್ಕಳ ಶೇಖಡಾವಾರು ಪ್ರಮಾಣ | 5 ವರ್ಷದೊಳಗಿನ ಎತ್ತರಕ್ಕೆ ತಕ್ಕ ತೂಕವಿಲ್ಲದ ಮಕ್ಕಳು | 5 ವರ್ಷದೊಳಗಿನ ಒಟ್ಟು ಮಕ್ಕಳು | | | ಮಕ್ಕಳಲ್ಲಿ ಅಪೌಷ್ಟಿಕತೆಯನ್ನು ಹೋಗಲಾಡಿಸಿ ಎಲ್ಲಾ ಮಕ್ಕಳನ್ನು ಆರೋಗ್ಯವಂತರನ್ನಾಗಿಸುವುದು |
| 6. | ಮಕ್ಕಳಲ್ಲಿ ರಕ್ತ ಹೀನತೆ – (ಆಹಾರ ಭದ್ರತಾ ಕಾರ್ಯಕ್ರಮ) | 1. ಅಂಗನವಾಡಿ ಕಾರ್ಯಕರ್ತೆ<br>2. ಆಶಾ ಕಾರ್ಯಕರ್ತೆ/ ಆರೋಗ್ಯ ಸಹಾಯಕರು.<br>3. ನ್ಯಾಯಬೆಲೆ ಅಂಗಡಿ ನಾಗರೀಕ ಸರಬರಾಜು ಇಲಾಖೆ | ರಕ್ತ ಹೀನತೆಯಿಂದ ಬಳಲುತ್ತಿರುವ (<11.5 g/dl) 6 ರಿಂದ 59 ತಿಂಗಳ ಮಕ್ಕಳ ಶೇಖಡವಾರು ಪ್ರಮಾಣ | ರಕ್ತ ಹೀನತೆಯಿಂದ ಬಳಲುತ್ತಿರುವ 6 ರಿಂದ 59 ತಿಂಗಳ ಮಕ್ಕಳು | 6 ರಿಂದ 59 ತಿಂಗಳ ಒಟ್ಟು ಮಕ್ಕಳು | | | 6 ರಿಂದ 59 ತಿಂಗಳ ಎಲ್ಲಾ ಮಕ್ಕಳು ಕನಿಷ್ಠ <11.5 g/dl ಹಿಮೋಗ್ಲೋಬಿನ್ ಪ್ರಮಾಣ ಇರುವುದನ್ನು ಖಾತ್ರಿ ಪಡಿಸುವುದು |
| 7. | ಪ್ರೌಢಾವಸ್ಥೆಯ ಮಕ್ಕಳ ಪ್ರಮಾಣ–ಆಹಾರ ಭದ್ರತಾ ಕಾಯಿದೆ 2013 | 1. ಅಂಗನವಾಡಿ ಕಾರ್ಯಕರ್ತೆ<br>2. ಆಶಾ ಕಾರ್ಯಕರ್ತೆ/ ಆರೋಗ್ಯ ಸಹಾಯಕರು.<br>3. ನ್ಯಾಯಬೆಲೆ ಅಂಗಡಿ ನಾಗರೀಕ ಸರಬರಾಜು ಇಲಾಖೆ | ರಕ್ತ ಹೀನತೆಯಿಂದ ಬಳಲುತ್ತಿರುವ 5 ರಿಂದ 14 ವರ್ಷದೊಳಗಿನ ಮಕ್ಕಳ ಶೇಖಡವಾರು ಪ್ರಮಾಣ | ರಕ್ತ ಹೀನತೆಯಿಂದ ಬಳಲುತ್ತಿರುವ 5 ರಿಂದ 14 ವರ್ಷದೊಳಗಿನ ಮಕ್ಕಳು | 5 ರಿಂದ 14 ವರ್ಷದೊಳಗಿನ ಒಟ್ಟು ಮಕ್ಕಳು | | | 5 ರಿಂದ 14 ವರ್ಷದ ಎಲ್ಲಾ ಮಕ್ಕಳು ಕನಿಷ್ಠ <11.50 g/dl ಹಿಮೋಗ್ಲೋಬಿನ್ ಪ್ರಮಾಣ ಇರುವುದನ್ನು ಖಾತ್ರಿ ಪಡಿಸುವುದು |

| ಕ್ರಮ ಸಂಖ್ಯೆ | ಗುರುತಿಸಿರುವ ಸಮಸ್ಯೆ / ಅಂಶ | ಮಾಹಿತಿಯ ಮೂಲ | ಸೂಚ್ಯಂಕ | ಸಂಖ್ಯಾಕಾರಕ (Numerators) (2021-22 ರಂತೆ ಸಂಖ್ಯೆಯನ್ನು ನಮೂದಿಸಿ) | ಛೇದಕ (Denominator) (2021-22 ರಂತೆ ಸಂಖ್ಯೆಯನ್ನು ನಮೂದಿಸಿ) | ಪ್ರಸ್ತುತ ಸ್ಥಿತಿ (ಸಂಖ್ಯೆಯಲ್ಲಿ) (2021-22ರಂತೆ) | ಸಾಧಿಸಬಹುದಾದ ಗುರಿ | ಸಾಧಿಸಬಹುದಾದ ಗುರಿ ನಿರ್ಧರಣೆಗೆ ಉದಾಹರಣೆ |
|---|---|---|---|---|---|---|---|---|
| 8. | 15 ರಿಂದ 19 ವರ್ಷದೊಳಗಿನ ಹೆಣ್ಣು ಮಕ್ಕಳುಗಳು | 1. ಅಂಗನವಾಡಿ ಕಾರ್ಯಕರ್ತೆ<br>2. ಆಶಾ ಕಾರ್ಯಕರ್ತೆ / ಆರೋಗ್ಯ ಸಹಾಯಕರು.<br>3. ಶಾಲಾ ಶಿಕ್ಷಕರು | ರಕ್ತ ಹೀನತೆಯಿಂದ ಬಳಲುತ್ತಿರುವ ಪ್ರೌಢಾವಸ್ಥೆಯ (15-19 ವರ್ಷದೊಳಗಿನ) ಹೆಣ್ಣು ಮಕ್ಕಳ ಶೇಖಡವಾರು ಪ್ರಮಾಣ | ರಕ್ತ ಹೀನತೆಯಿಂದ ಬಳಲುತ್ತಿರುವ ಪ್ರೌಢಾವಸ್ಥೆಯ (15-19 ವರ್ಷದೊಳಗಿನ) ಹೆಣ್ಣು ಮಕ್ಕಳು | 15 ರಿಂದ 19 ವರ್ಷದೊಳಗಿನ ಒಟ್ಟು ಹೆಣ್ಣು ಮಕ್ಕಳು | | | 5 ರಿಂದ 14 ವರ್ಷದ ಎಲ್ಲಾ ಮಕ್ಕಳು ಕನಿಷ್ಠ <11.5 g/dl ಹಿಮೋಗ್ಲೋಬಿನ್ ಪ್ರಮಾಣ ಇರುವುದನ್ನು ಖಾತ್ರಿ ಪಡಿಸುವುದು |
| 9. | ಶಾಲಾ ಪೂರ್ವ ಶಿಕ್ಷಣ | ಅಂಗನವಾಡಿ ಕಾರ್ಯಕರ್ತೆ | ಅಂಗನವಾಡಿ ಕೇಂದ್ರಗಳಲ್ಲಿ ದಾಖಲಾಗಿರುವ 3-6 ವರ್ಷದೊಳಗಿನ ಮಕ್ಕಳ ಶೇಖಡವಾರು ಪ್ರಮಾಣ | ಅಂಗನವಾಡಿ ಕೇಂದ್ರಗಳಲ್ಲಿ ದಾಖಲಾಗಿರುವ 3-6 ವರ್ಷದೊಳಗಿನ ಮಕ್ಕಳ ಸಂಖ್ಯೆ | 3-6 ವರ್ಷದೊಳಗಿನ ಒಟ್ಟು ಮಕ್ಕಳ ಸಂಖ್ಯೆ | | | ಎಲ್ಲಾ ಮಕ್ಕಳು ಅಂಗನವಾಡಿ ಕೇಂದ್ರಗಳು / ಬಾಲವಾಡಿ ಕೇಂದ್ರಗಳಿಗೆ ದಾಖಲಿಸುವುದು. |
| 10. | ಮಕ್ಕಳ ಕಣ್ಮರೆ | ಅಂಗನವಾಡಿ ಕಾರ್ಯಕರ್ತೆ<br>ಆಶಾ ಕಾರ್ಯಕರ್ತೆ<br>ಶಾಲಾ ಮುಖ್ಯ ಶಿಕ್ಷಕರು,<br>ಬೀಟ್ ಪೋಲೀಸ್,<br>ಮತ್ತು ಗ್ರಾಮ ಪಂಚಾಯತಿ. | ಒಟ್ಟು ಮಕ್ಕಳಲ್ಲಿ ಕಾಣೆಯಾದ ಮಕ್ಕಳ ಸಂಖ್ಯೆ | | | | | ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಯಾವುದೇ ಮಕ್ಕಳ ಅಪಹರಣಗಳು ಇಲ್ಲದಂತೆ ಮಾಡುವುದು. |

| ಕ್ರಮ ಸಂಖ್ಯೆ | ಗುರುತಿಸಿರುವ ಸಮಸ್ಯೆ / ಅಂಶ | ಮಾಹಿತಿಯ ಮೂಲ | ಸೂಚ್ಯಂಕ | ಸಂಖ್ಯಾಕಾರಕ (Numerators) (2021-22 ರಂತೆ ಸಂಖ್ಯೆಯನ್ನು ನಮೂದಿಸಿ) | ಛೇದಕ (Denominator) (2021-22 ರಂತೆ ಸಂಖ್ಯೆಯನ್ನು ನಮೂದಿಸಿ) | ಪ್ರಸ್ತುತ ಸ್ಥಿತಿ (ಸಂಖ್ಯೆಯಲ್ಲಿ) (2021-22ರಂತೆ) | ಸಾಧಿಸಬಹುದಾದ ಗುರಿ | ಸಾಧಿಸಬಹುದಾದ ಗುರಿ ನಿರ್ಧರಣೆಗೆ ಉದಾಹರಣೆ |
|---|---|---|---|---|---|---|---|---|
| 11. | ಮಕ್ಕಳ ಮೇಲಾಗುವ ಲೈಂಗಿಕ ದೌರ್ಜನ್ಯ | ಅಂಗನವಾಡಿ ಕಾರ್ಯಕರ್ತೆ, ಆಶಾ ಕಾರ್ಯಕರ್ತೆ, ಶಾಲಾ ಮುಖ್ಯ ಶಿಕ್ಷಕರು, ಬೀಟ್ ಪೋಲೀಸ್, ಮತ್ತು ಗ್ರಾಮ ಪಂಚಾಯತಿ. | ಮಕ್ಕಳಿಗೆ ಸಂಬಂಧಿಸಿದಂತೆ ಫೋಕ್ಸೋ ಪ್ರಕರಣಗಳ ಸಂಖ್ಯೆ | | | | | ಮಕ್ಕಳ ಮೇಲಿನ ಲೈಂಗಿಕ ಶೋಷಣೆ ಮುಕ್ತ ಗ್ರಾಮ ಪಂಚಾಯತಿ ನಿರ್ಮಾಣ |
| 12. | ಮಾದಕ ವ್ಯಸನ | ಅಂಗನವಾಡಿ ಕಾರ್ಯಕರ್ತೆ, ಆಶಾ ಕಾರ್ಯಕರ್ತೆ, ಶಾಲಾ ಮುಖ್ಯ ಶಿಕ್ಷಕರು, ಬೀಟ್ ಪೋಲೀಸ್, ಮಕ್ಕಳ ನೆರೆ ಹೊರೆಯವರು ಮತ್ತು ಗ್ರಾಮ ಪಂಚಾಯತಿ. | ವ್ಯಸನ ಮುಕ್ತ ಕೇಂದ್ರಗಳಲ್ಲಿ ದಾಖಲಾಗಿರುವ 18 ವರ್ಷದೊಳಗಿನ ಮಕ್ಕಳ ಸಂಖ್ಯೆ | | | | | ವ್ಯಸನ ಮುಕ್ತ ಗ್ರಾಮ ಪಂಚಾಯತಿಗಳ ನಿರ್ಮಾಣ |
| 13. | 0-6 ವರ್ಷದೊಳಗಿನ ವಿಶೇಷ ಚೇತನ ಮಕ್ಕಳು | ಅಂಗನವಾಡಿ ಕಾರ್ಯಕರ್ತೆ, ಆಶಾ ಕಾರ್ಯಕರ್ತೆ, ವಿಆರ್ ಡಬ್ಲ್ಯು | ಅಂಗನವಾಡಿ ಕೇಂದ್ರದಲ್ಲಿ ಸೌಕರ್ಯಗಳನ್ನು ಪಡೆದುಕೊಂಡ ವಿಶೇಷ ಚೇತನ ಮಕ್ಕಳ ಶೇಖಡವಾರು ಪ್ರಮಾಣ | ಶಾಲಾ ಪೂರ್ವ ಹಂತದಲ್ಲಿ ಅಂಗನವಾಡಿ ಕೇಂದ್ರದಲ್ಲಿ ಸೌಕರ್ಯಗಳನ್ನು ಪಡೆದಿರುವ ವಿಶೇಷ ಚೇತನ ಮಕ್ಕಳ ಸಂಖ್ಯೆ | ಒಟ್ಟು ವಿಶೇಷ ಚೇತನ ಮಕ್ಕಳ ಸಂಖ್ಯೆ | | | ವಿಶೇಷ ಚೇತನ ಮಕ್ಕಳಿಗೆ ದೊರೆಯಬೇಕಾದ ಸೌಕರ್ಯಗಳನ್ನು ತಲುಪಿಸುವುದು |

| ಕ್ರಮ ಸಂಖ್ಯೆ | ಗುರುತಿಸಿರುವ ಸಮಸ್ಯೆ / ಅಂಶ | ಮಾಹಿತಿಯ ಮೂಲ | ಸೂಚ್ಯಂಕ | ಸಂಖ್ಯಾಕಾರಕ (Numerators) (2021-22 ರಂತೆ ಸಂಖ್ಯೆಯನ್ನು ನಮೂದಿಸಿ) | ಛೇದಕ (Denominator) (2021-22 ರಂತೆ ಸಂಖ್ಯೆಯನ್ನು ನಮೂದಿಸಿ) | ಪ್ರಸ್ತುತ ಸ್ಥಿತಿ (ಸಂಖ್ಯೆಯಲ್ಲಿ) (2021-22ರಂತೆ) | ಸಾಧಿಸಬಹುದಾದ ಗುರಿ | ಸಾಧಿಸಬಹುದಾದ ಗುರಿ ನಿರ್ಧರಣೆಗೆ ಉದಾಹರಣೆ |
|---|---|---|---|---|---|---|---|---|
| 14. | 6 ರಿಂದ 18 ವರ್ಷದೊಳಗಿನ ವಿಶೇಷ ಚೇತನ ಮಕ್ಕಳು | ಅಂಗನವಾಡಿ ಕಾರ್ಯಕರ್ತೆ, ಆಶಾ ಕಾರ್ಯಕರ್ತೆ, ವಿಆರ್ ಡಬ್ಲ್ಯೂ | ಶಾಲೆಗಳಲ್ಲಿ ಮತ್ತು ವಿಶೇಷ ಶಾಲೆಗಳಲ್ಲಿ ನೋಂದಣಿಯಾದ ವಿಶೇಷ ಚೇತನ ಮಕ್ಕಳ ಶೇಖಡವಾರು ಪ್ರಮಾಣ | ಶಾಲೆ/ ವಿಶೇಷ ಶಾಲೆಗಳ ಹಂತದಲ್ಲಿ ನೋಂದಣಿಯಾಗಿ ಸೌಕರ್ಯಗಳನ್ನು ಪಡೆದಿರುವ ವಿಶೇಷ ಚೇತನ ಮಕ್ಕಳ ಸಂಖ್ಯೆ | ಒಟ್ಟು ವಿಶೇಷ ಚೇತನ ಮಕ್ಕಳ ಸಂಖ್ಯೆ | | | ವಿಶೇಷ ಚೇತನ ಮಕ್ಕಳಿಗೆ ದೊರೆಯಬೇಕಾದ ಸೌಕರ್ಯಗಳನ್ನು ತಲುಪಿಸುವುದು |
| 15. | ಬಾಲ್ಯವಿವಾಹ | ಅಂಗನವಾಡಿ ಕಾರ್ಯಕರ್ತೆ, ಆಶಾ ಕಾರ್ಯಕರ್ತೆ, ಶಾಲಾ ಮುಖ್ಯ ಶಿಕ್ಷಕರು, ಬೀಟ್ ಪೋಲೀಸ್, ಮತ್ತು ಗ್ರಾಮ ಪಂಚಾಯತಿ. | ಬಾಲ್ಯವಿವಾಹ ನಿಷೇಧ ಕಾಯಿದೆಯಡಿ ವರದಿಯಾದ ಒಟ್ಟು ಪ್ರಕರಣಗಳ ಸಂಖ್ಯೆ | | | | | ಬಾಲ್ಯ ವಿವಾಹ ಮುಕ್ತ ಗ್ರಾಮ ಪಂಚಾಯತ್ ನಿರ್ಮಾಣ |
| 16. | ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಕ್ಕಳು (ಬಾಲಾಪರಾಧಿಗಳು) | ಅಂಗನವಾಡಿ ಕಾರ್ಯಕರ್ತೆ, ಬೀಟ್ ಪೋಲೀಸ್, ಗ್ರಾಮ ಪಂಚಾಯಿತಿ | ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಕ್ಕಳು (ಬಾಲಾಪರಾಧ) ಗಳ ಸಂಖ್ಯೆ | | | | | ಬಾಲಾಪರಾಧ ಮುಕ್ತ ಗ್ರಾಮ ಪಂಚಾಯಿತಿ |
| 17. | ಬಾಲ ಭಿಕ್ಷುಕರು | ಅಂಗನವಾಡಿ ಕಾರ್ಯಕರ್ತೆ, ಆಶಾ ಕಾರ್ಯಕರ್ತೆ, ಗ್ರಾಮ ಪಂಚಾಯಿತಿ | ಗ್ರಾಮ ಪಂಚಾಯಿತಿಯಲ್ಲಿನ ಬಾಲ ಭಿಕ್ಷುಕರುಗಳ ಸಂಖ್ಯೆ | | | | | ಬಾಲ ಭಿಕ್ಷುಕ ಮುಕ್ತ ಗ್ರಾಮ |

| ಕ್ರಮ ಸಂಖ್ಯೆ | ಗುರುತಿಸಿರುವ ಸಮಸ್ಯೆ / ಅಂಶ | ಮಾಹಿತಿಯ ಮೂಲ | ಸೂಚ್ಯಂಕ | ಸಂಖ್ಯಾಕಾರಕ (Numerators) (2021-22 ರಂತೆ ಸಂಖ್ಯೆಯನ್ನು ನಮೂದಿಸಿ) | ಛೇದಕ (Denominator) (2021-22 ರಂತೆ ಸಂಖ್ಯೆಯನ್ನು ನಮೂದಿಸಿ) | ಪ್ರಸ್ತುತ ಸ್ಥಿತಿ (ಸಂಖ್ಯೆಯಲ್ಲಿ) (2021-22ರಂತೆ) | ಸಾಧಿಸಬಹುದಾದ ಗುರಿ | ಸಾಧಿಸಬಹುದಾದ ಗುರಿ ನಿರ್ಧರಣೆಗೆ ಉದಾಹರಣೆ |
|---|---|---|---|---|---|---|---|---|
| 18. | ಜನನ ಸಂದರ್ಭದಲ್ಲಿನ ಲಿಂಗಾನುಪಾತ (Ratio) | ಅಂಗನವಾಡಿ ಕಾರ್ಯಕರ್ತೆ, ಆಶಾ ಕಾರ್ಯಕರ್ತೆ, ಗ್ರಾಮ ಪಂಚಾಯಿತಿ | ಜನನ ಸಂದರ್ಭದಲ್ಲಿ ಹೆಣ್ಣು ಮತ್ತು ಗಂಡು ಮಕ್ಕಳ ಲಿಂಗಾನುಪಾತ | ಉಲ್ಲೇಖಿತ ವರ್ಷದಲ್ಲಿ ಜನಿಸಿದ ಹೆಣ್ಣು ಮಕ್ಕಳ ಸಂಖ್ಯೆ | ಉಲ್ಲೇಖಿತ ವರ್ಷದಲ್ಲಿ ಜನಿಸಿದ ಗಂಡು ಮಕ್ಕಳ ಸಂಖ್ಯೆ | | | ಜನನ ಸಂದರ್ಭದಲ್ಲಿ ಲಿಂಗಾನುಪಾತ ಸಾಧಿಸುವುದು |
| 19. | ಮಕ್ಕಳ ಲಿಂಗಾನುಪಾತ (Ratio) | ಅಂಗನವಾಡಿ ಕಾರ್ಯಕರ್ತೆ, ಆಶಾ ಕಾರ್ಯಕರ್ತೆ, ಗ್ರಾಮ ಪಂಚಾಯಿತಿ | ಗಂಡು ಮತ್ತು ಹೆಣ್ಣು ಮಕ್ಕಳ ಲಿಂಗಾನುಪಾತ | 0-6 ವರ್ಷದೊಳಗಿನ ಒಟ್ಟು ಹೆಣ್ಣು ಮಕ್ಕಳ ಸಂಖ್ಯೆ | 0-6 ವರ್ಷದೊಳಗಿನ ಒಟ್ಟು ಗಂಡು ಮಕ್ಕಳ ಸಂಖ್ಯೆ | | | ಮಕ್ಕಳ ಲಿಂಗಾನುಪಾತ ಸಾಧನೆ |
| 20. | ಪರಿತ್ಯಕ್ತ ಮಕ್ಕಳು | ಸಮುದಾಯ, ಅಂಗನವಾಡಿ ಕಾರ್ಯಕರ್ತೆ, ಆಶಾ ಕಾರ್ಯಕರ್ತೆ, | ಗ್ರಾಮದ ಮಿತಿಯಲ್ಲಿನ ಪರಿತ್ಯಕ್ತ ಮಕ್ಕಳ ಸಂಖ್ಯೆ | | | | | ಪರಿತ್ಯಕ್ತ ಮಕ್ಕಳು ಸಾಮಾಜಿಕ ಸಮಸ್ಯೆಗಳ ನಿವಾರಣೆ |
| 21. | ಬಾಲ ಕಾರ್ಮಿಕರು | ಸಮುದಾಯ, ಅಂಗನವಾಡಿ ಕಾರ್ಯಕರ್ತೆ, ಆಶಾ ಕಾರ್ಯಕರ್ತೆ, ಕಾರ್ಮಿಕ ನಿರೀಕ್ಷಕ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ | ಗ್ರಾಮ ಮಿತಿಯಲ್ಲಿನ ಬಾಲ ಕಾರ್ಮಿಕರ ಸಂಖ್ಯೆ | | | | | ಬಾಲ ಕಾರ್ಮಿಕ ಮುಕ್ತ ಗ್ರಾಮ ಪಂಚಾಯಿತಿ |

# ಗ್ರಾಮ ಪಂಚಾಯಿತಿ ಮಕ್ಕಳ ಅಭಿವೃದ್ಧಿ ಯೋಜನೆ

| ಸಂ. | ಗುರುತಿಸಿರುವ ಸಮಸ್ಯೆ / ಅಂಶ | ಪ್ರಸ್ತುತ ಸ್ಥಿತಿ (ಸಂಖ್ಯೆಯಲ್ಲಿ) (2021-22ರಂತೆ) | ಗುರಿ | ಗುರಿಯನ್ನು ಸಾಧಿಸುವ ಅವಧಿ ಶೀಘ್ರ (ಕೂಡಲೆ) / ಅಲ್ಪಾವಧಿ (ಒಂದು ವರ್ಷದವರೆಗೆ) / ಮಧ್ಯಮಾವಧಿ (3 ವರ್ಷದವರೆಗೆ) / ದೀರ್ಘಾವಧಿ (5 ವರ್ಷದವರೆಗೆ) | | | | | ಚಟುವಟಿಕೆಗಳು | ಇಲಾಖೆಗಳು / ಪಂ.ರಾಜ್ ಸಂಸ್ಥೆಗಳು/ ಸಮುದಾಯ | ಇಲಾಖಾವಾರು ಯೋಜನೆಗಳು / ಅನುದಾನದ ಮೂಲಗಳು | ವೆಚ್ಚ ರಹಿತ ಚಟುವಟಿಕೆ (ಹೌದು/ಇಲ್ಲ) | ಅಂದಾಜು ವೆಚ್ಚ (ರೂಗಳಲ್ಲಿ) |
|---|---|---|---|---|---|---|---|---|---|---|---|---|---|
| | | | | 22-23 | 23-24 | 24-25 | 25-26 | 26-27 | | | | | |
| 1. | ಸಮಗ್ರ ಶಿಶು ಅಭಿವೃದ್ಧಿ ಯೋಜನೆ | | | | | | | | | | | | |
| 2. | 0-3 ವರ್ಷದೊಳಗಿನ ಮಕ್ಕಳಲ್ಲಿ ಸಮಗ್ರ ಶಿಶು ಅಭಿವೃದ್ಧಿ ಯೋಜನೆಯಡಿ ಸೌಲಭ್ಯ ಪಡೆಯುತ್ತಿರುವ ಫಲಾನುಭವಿಗಳ ಸಂಖ್ಯೆ | | | | | | | | | | | | |
| 3. | 3-6 ವರ್ಷದೊಳಗಿನವರ ಸಮಗ್ರ ಶಿಶು ಅಭಿವೃದ್ಧಿ ಯೋಜನೆಯಡಿ ಸೌಲಭ್ಯ ಪಡೆಯುತ್ತಿರುವವರ ಸಂಖ್ಯೆ | | | | | | | | | | | | |
| 4. | ಗರ್ಭಿಣಿಯರು ಮತ್ತು ಹಾಲುಣಿಸುವ ತಾಯಂದಿರಲ್ಲಿ -ಸಮಗ್ರ ಶಿಶು ಅಭಿವೃದ್ಧಿ ಯೋಜನೆಯಡಿ ಸೌಲಭ್ಯ ಪಡೆಯುತ್ತಿರುವವರ ಸಂಖ್ಯೆ | | | | | | | | | | | | |
| 5. | ಎತ್ತರಕ್ಕೆ ತಕ್ಕ ತೂಕವಿಲ್ಲದ (ವೇಸ್ಟೆಡ್) ಮಕ್ಕಳು | | | | | | | | | | | | |
| 6. | ಮಕ್ಕಳಲ್ಲಿ ರಕ್ತ ಹೀನತೆ- (ಆಹಾರ ಭದ್ರತಾ ಕಾರ್ಯಕ್ರಮ) | | | | | | | | | | | | |
| 7. | ಪ್ರೌಢಾವಸ್ಥೆಯ ಮಕ್ಕಳ ಪ್ರಮಾಣ- ಆಹಾರ ಭದ್ರತಾ ಕಾಯಿದೆ 2013 | | | | | | | | | | | | |

| ಕ್ರ.ಸಂ. | ಗುರುತಿಸಿರುವ ಸಮಸ್ಯೆ / ಅಂಶ | ಪ್ರಸ್ತುತ ಸ್ಥಿತಿ (ಸಂಖ್ಯೆಯಲ್ಲಿ) (2021-22ರಂತೆ) | ಗುರಿ | ಗುರಿಯನ್ನು ಸಾಧಿಸುವ ಅವಧಿ ಶೀಘ್ರ (ಕೂಡಲೆ) / ಅಲ್ಪಾವಧಿ (ಒಂದು ವರ್ಷದವರೆಗೆ) / ಮಧ್ಯಮಾವಧಿ (3 ವರ್ಷದವರೆಗೆ) / ದೀರ್ಘಾವಧಿ (5 ವರ್ಷದವರೆಗೆ) | | | | | ಚಟುವಟಿಕೆಗಳು | ಇಲಾಖೆಗಳು / ಪಂ.ರಾಜ್ ಸಂಸ್ಥೆಗಳು/ ಸಮುದಾಯ | ಇಲಾಖಾವಾರು ಯೋಜನೆಗಳು / ಅನುದಾನದ ಮೂಲಗಳು | ವೆಚ್ಚ ರಹಿತ ಚಟುವಟಿಕೆ (ಹೌದು/ಇಲ್ಲ) | ಅಂದಾಜು ವೆಚ್ಚ (ರೂಗಳಲ್ಲಿ) |
|---|---|---|---|---|---|---|---|---|---|---|---|---|---|
| | | | | 22-23 | 23-24 | 24-25 | 25-26 | 26-27 | | | | | |
| 8. | 15 ರಿಂದ 19 ವರ್ಷದೊಳಗಿನ ಹೆಣ್ಣು ಮಕ್ಕಳುಗಳು | | | | | | | | | | | | |
| 9. | ಶಾಲಾ ಪೂರ್ವ ಶಿಕ್ಷಣ | | | | | | | | | | | | |
| 10. | ಮಕ್ಕಳ ಕಣ್ಮರೆ | | | | | | | | | | | | |
| 11. | ಮಕ್ಕಳ ಮೇಲಾಗುವ ಲೈಂಗಿಕ ದೌರ್ಜನ್ಯ | | | | | | | | | | | | |
| 12. | ಮಾದಕ ವ್ಯಸನ | | | | | | | | | | | | |
| 13. | 0-6 ವರ್ಷದೊಳಗಿನ ವಿಶೇಷ ಚೇತನ ಮಕ್ಕಳು | | | | | | | | | | | | |
| 14. | 6 ರಿಂದ 18 ವರ್ಷದೊಳಗಿನ ವಿಶೇಷ ಚೇತನ ಮಕ್ಕಳು | | | | | | | | | | | | |
| 15. | ಬಾಲ್ಯವಿವಾಹ | | | | | | | | | | | | |
| 16. | ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಕ್ಕಳು (ಬಾಲಾಪರಾಧಿಗಳು) | | | | | | | | | | | | |
| 17. | ಬಾಲ ಭಿಕ್ಷುಕರು | | | | | | | | | | | | |
| 18. | ಜನನ ಸಂದರ್ಭದಲ್ಲಿನ ಲಿಂಗಾನುಪಾತ (Ratio) | | | | | | | | | | | | |
| 19. | ಮಕ್ಕಳ ಲಿಂಗಾನುಪಾತ (Ratio) | | | | | | | | | | | | |
| 20. | ಪರಿತ್ಯಕ್ತ ಮಕ್ಕಳು | | | | | | | | | | | | |
| 21. | ಬಾಲ ಕಾರ್ಮಿಕರು | | | | | | | | | | | | |